<econom12><Social Sciences><Economics><1985><Book><ಅರ್ಥಶಾಸ್ತ್ರದ ಮೂಲ ಪಾಠಗಳು>< ಎಂ. ವಿ.ಆರ್. ರಾವ್><28>



ಅಧ್ಯಾಯ ೭

ಉತ್ಪಾದನಾ ಅಂಶಗಳು : ಮೂರು

೧. ಅಂಶಗಳ ಬೆಲೆ

ಅಂಶಗಳ ಬೆಲೆ ಎಂದರೆ ಏನು ? : ಈಗ ನಾವು ಹೇಗೆ ಬೇರೆ ಬೇರೆ ಅಂಶಗಳು ಉತ್ಪಾದನೆಯಲ್ಲಿ ನೆರವಾಗುತ್ತವೆ ಎಂಬುದನ್ನು ಅರಿತಿದ್ದೇವೆ. ಅಂಥ ಉತ್ಪಾದನಾ ಅಂಶಗಳು ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆ. ಇಂದಿನ ಹಣದ ಪ್ರಪಂಚದಲ್ಲಿ ಯಾವುದೇ ವಸ್ತುವೂ ಒಂದು ಬೆಲೆಯನ್ನು ಕೊಡದೇ ದೊರೆಯುವುದಿಲ್ಲ. ಹಾಗೇ ಉತ್ಪಾದನಾ ಅಂಶಗಳಿಗೂ ಒಂದು ಬೆಲೆಯನ್ನು ಕೊಟ್ಟು ಅವುಗಳನ್ನು ಬಳಕೆಗಾಗಿ ಪಡೆಯಬೇಕು. ಬೆಲೆಯನ್ನು ಇಂಥ ಅಂಶಗಳ ಒಡೆಯರಿಗೆ ಸಲ್ಲಿಸಿ ಅದರ ನೆರವನ್ನು ಪಡೆಯಬಹುದು. ಹೀಗೆ ಕೊಡುವ ಬೆಲೆಯನ್ನು ಅಂಶಬೆಲೆ ಎಂದಿದ್ದೇವೆ. ಏಕೆಂದರೆ ಇದನ್ನು ಸಲ್ಲಿಸುವುದು ಉತ್ಪಾದನಾ ಅಂಶಗಳ ಬಳಕೆಯನ್ನು ಮಾಡಿದ್ದಕ್ಕಾಗಿಯೇ. ಮುಂದೆ, ಉತ್ಪಾದನಾ ಅಂಶಗಳ ಬೆಲೆ ಎನ್ನದೇ ಅಂಶ ಬೆಲೆ ಎಂದೇ ಉಪಯೋಗಿಸಲಾಗಿರುವುದನ್ನು ಗಮನಿಸಬೇಕು.

ಯಾವುದೇ ಒಂದು ವಸ್ತುವಿನ ವಿನಿಮಯ ಮೌಲ್ಯವನ್ನು ಹಣದ ರೂಪದಲ್ಲಿ ಹೇಳುವುದಕ್ಕೆ ಬೆಲೆ ಎನ್ನಲಾಗುತ್ತದೆ. ಇದು ನಿಮಗೆ ಆಗಲೇ ತಿಳಿದಿರುವ ವಿಷಯ ಆಗಿದೆ. ಉತ್ಪಾದನಾ ಅಂಶಗಳಿಗೆ ಕೊಡುವ ಬೆಲೆ ಏನಿದ್ದರೂ ಅದನ್ನು ಕೊಂಡುಕೊಳ್ಳಲು ಕೊಡುವ ಬೆಲೆ ಅಲ್ಲ. ಬದಲು, ಅವುಗಳನ್ನು

ಬಳಸುವುದಕ್ಕೆ ಕೊಟ್ಟ ಒಂದು ಸಂಭಾವನೆ, ಅಷ್ಟೇ. ಇಂಥ ಸಂಭಾವನೆ ಅಂಶಗಳ ಒಡೆಯರಿಗೆ ಕೊಡಲಾಗುತ್ತದೆ. ಅಂದರೆ, ಅಂಶಗಳ ಒಡೆಯರಿಗೆ ಇದೊಂದು ಆದಾಯ ಎನ್ನುವುದನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು.

ಹೀಗೆ ಪ್ರತಿಯೊಂದು ಉತ್ಪಾದನಾ ಅಂಶಗಳಿಗೂ ಕೊಡುವ ಬೆಲೆಗೆ



ಅದರದೇ ಆದ ನಿರ್ದಿಷ್ಟ ನಾಮಧೇಯ ಇದೆ. ಭೂಮಿಗೆ ಬಾಡಿಗೆ, ಶ್ರಮಕ್ಕೆ ವೇತನ (ಕೂಲಿ, ಸಂಬಳ ಇತ್ಯಾದಿ) ಬಂಡವಾಳ ಬಳಸಿದ್ದಕ್ಕೆ ಬಡ್ಡಿ, ಮತ್ತು ಸಂಘಟನೆಗೆ ಲಾಭ. ಈಗ ಪ್ರತಿಯೊಂದು ಪ್ರತಿಫಲ ಅಥವಾ ಸಂಭಾವನೆಯನ್ನೂ ವಿಷದವಾಗಿ ಪರಿಶೀಲಿಸೋಣ. ನಿಮ್ಮ ಪಠ್ಯಕ್ರಮ ಪ್ರತಿಯೊಂದು ಸಂಭಾವನೆಗೂ ಸಂಬಂಧಪಟ್ಟ ಸೈದ್ಧಾಂತಿಕ ಭಾಗವನ್ನು ಹಾಗೂ ವಿವಿಧ ಸಿದ್ಧಾಂತಗಳನ್ನು ನಿಮಗೆ ತಿಳಿಸುವ ಅಗತ್ಯ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದೆ. ಆದ್ದರಿಂದ ನಿಮ್ಮನ್ನು ಈ ವಿಷಯಗಳ ಬಗ್ಗೆ ಆಳವಾದ ಆಲೋಚನೆ ಮಾಡಬಹುದಾದ ಶ್ರಮಕ್ಕೆ ಈಡುಮಾಡುವುದಿಲ್ಲ.

೧. ಬಾಡಿಗೆ : ಸಾಮಾನ್ಯ ಭಾಷೆಯಲ್ಲಿ, ನಾವು ಭೂಮಿ ಅಥವಾ ಕಟ್ಟಡಗಳನ್ನು ಬಳಸಿದ್ದಕ್ಕೆ ಅಥವಾ ಉಪಯೋಗಿಸಿದ್ದಕ್ಕೆ ಪ್ರತಿಯಾಗಿ ಹಣ ಕೊಡುವುದನ್ನು ಬಾಡಿಗೆ ಎಂದು ಹೇಳಲಾಗುತ್ತದೆ. ಅಂಥ ಬಾಡಿಗೆ 'ವಾಣಿಜ್ಯ ಬಾಡಿಗೆ' ಅಥವಾ ಒಪ್ಪಂದದ ಮೇರೆ ಕೊಡುವ 'ಒಪ್ಪಂದದ ಬಾಡಿಗೆ.' ನಮಗೆ ಅದರ ಬಗ್ಗೆ ಇಲ್ಲಿ ಆಸಕ್ತಿ ಇಲ್ಲ. ಯಾರೇ ಆದರೂ ವಾಣಿಜ್ಯ ಬಾಡಿಗೆಯಾಗಿ ಕೊಡುವ ಬಾಡಿಗೆ, ಭೂಮಿಯ ಆರ್ಥಿಕ ಮೌಲ್ಯದ ಅಂದಾಜಿನ ಮೇಲೆ ನಿಂತಿದೆ. ನಮ್ಮ ಆಸಕ್ತಿ ಏನಿದ್ದರೂ ಆರ್ಥಿಕ ಬಾಡಿಗೆಯ ಬಗ್ಗೆ ಮಾತ್ರ.

ಆರ್ಥಿಕ ಬಾಡಿಗೆ ಎಂದರೇನು? ಒಂದೇ ಪ್ರಮಾಣದಲ್ಲಿ ಎರಡು ತುಂಡು ಭೂಮಿಗಳ ಮೇಲೆ ಒಂದೇ ಪ್ರಮಾಣದಲ್ಲಿ (ಅಂದರೆ ಸಮ ಪ್ರಮಾಣದಲ್ಲಿ) ಬಂಡವಾಳ ಮತ್ತು ಶ್ರಮವನ್ನು ಬಳಸಿದಾಗ, ಒಂದು ಭೂಮಿಯ ಉತ್ಪನ್ನದ

ಮೌಲ್ಯದ ಇನ್ನೊಂದು ಭೂಮಿಯ ಉತ್ಪನ್ನದ ಮೌಲ್ಯಕ್ಕಿಂತಲೂ ಹೆಚ್ಚಾಗಿದ್ದರೆ, ಹಾಗೆ ಹೆಚ್ಚುವರಿ ಇದ್ದ ಭೂಮಿಗೆ ಆರ್ಥಿಕ ಬಾಡಿಗೆ ಉಂಟಾಗುತ್ತದೆ. ಏಕೆಂದರೆ ಇನ್ನೊಂದು ಭೂಮಿಯ ಉತ್ಪನ್ನದ ಮೌಲ್ಯ ಬಳಸಿದ ಬಂಡವಾಳ ಮತ್ತು ಶ್ರಮದ ಮೇಲೆ ಮಾಡಿದ ವೆಚ್ಚಕ್ಕೆ ಸಮನಾಗೇ ಇರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಒಂದೇ ಪ್ರಮಾಣದಲ್ಲಿ ಶ್ರಮ ಮತ್ತು ಬಂಡವಾಳವನ್ನು ಬಳಸಿದಾಗ ಒಂದು ಭೂಮಿಯ ಆದಾಯ ಇನ್ನೊಂದು ಭೂಮಿಯ ಆದಾಯಕ್ಕಿಂತಲೂ ಹೆಚ್ಚುವರಿ ಇದ್ದರೆ, ಅಂಥ ಹೆಚ್ಚುವರಿ ಆದಾಯವನ್ನು ಆರ್ಥಿಕ ಬಾಡಿಗೆ ಎನ್ನಲಾಗುತ್ತದೆ. ಇದನ್ನು ಇನ್ನಷ್ಟು ವಿಷದೀಕರಿಸೋಣ. ಭೂಮಿಯ ಫಲೋತ್ಪಾದಕತೆ ಸ್ವಾಭಾವಿಕವಾಗೇ ಬೇರೆ



ಬೇರೆ ಇರುತ್ತದೆ. ಅಂದರೆ ಭೂಮಿಯನ್ನು ವಿವಿಧ ವರ್ಗಗಳಾಗಿ ವಿಂಗಡಿಸಬಹುದು. ಹೀಗೆ ವಿವಿಧ ವಿಂಗಡಣೆಯ ಎಲ್ಲ ಭೂಮಿಯ ಮೇಲೂ ಒಂದೇ ಪ್ರಮಾಣದಲ್ಲಿ ಶ್ರಮ ಮತ್ತು ಬಂಡವಾಳವನ್ನು ಹಾಕುತ್ತೇವೆ ಎಂದರೆ, ಎಲ್ಲ ಭೂಮಿಯ ಉತ್ಪಾದನಾ ವೆಚ್ಚ ಒಂದೇ ಎನ್ನಬಹುದು, ಅಲ್ಲವೇ? ಹಾಗೆ ಶ್ರಮ ಮತ್ತು ಬಂಡವಾಳವನ್ನು ಹಾಕಿ ಬೆಳೆ ತೆಗೆದಾಗ, ಪ್ರತಿಯೊಂದು ವಿಂಗಡಣೆಯ ಜಮೀನಿನ ಉತ್ಪನ್ನ (ಉತ್ಪನ್ನದ ಪ್ರಮಾಣ ಹಾಗೂ ಉತ್ಪನ್ನದ ಮೌಲ್ಯದ ಅಥವಾ ಸರಳವಾಗಿ ಆದಾಯ) ಬೇರೆ ಬೇರೆ ಪ್ರಮಾಣದಲ್ಲೇ ಇರುತ್ತದೆ. ಏಕೆ ಹೀಗೆ ಇರುತ್ತದೆ ಎಂದರೆ, ಈಗಾಗಲೇ ತಿಳಿಸಿರುವಂತೆ ಭೂಮಿಯ ಫಲೋತ್ಪಾದಕತೆ ಭೂಮಿಯಿಂದ ಭೂಮಿಗೆ ಬೇರೆಯೇ ಇರುತ್ತದೆ. ಅಂದರೆ ಕೆಲವು ಜಮೀನಿನಲ್ಲಿ ಉತ್ಪಾದನಾ ವೆಚ್ಚ, ಬೆಳೆದ ಉತ್ಪನ್ನದ ಮೌಲ್ಯಕ್ಕೆ ಸಮನಾಗೇ ಇರುತ್ತದೆಯೋ ಅಂಥ ಭೂಮಿಯನ್ನು "ಬಾಡಿಗೆ ಇಲ್ಲದ ಭೂಮಿ" ಎಂದೂ "ಅಂಚಿನ ಭೂಮಿ" ಎಂದೂ ಹೇಳಲಾಗುತ್ತದೆ. ಇದುವರೆಗೂ ನಾವು ಹೇಳುತ್ತಿದ್ದ ಹೆಚ್ಚುವರಿ ಆದಾಯ ಇರುವ ಭೂಮಿಗೆ

ಬಾಡಿಗೆ ಇರುತ್ತದೆ. ಏಕೆಂದರೆ, ಇಂಥ ಅಂಚಿನ ಭೂಮಿಗೆ ಹೋಲಿಸಿದಾಗ ಶ್ರೇಷ್ಟ ಭೂಮಿಯ ಉತ್ಪನ್ನ ಅಥವಾ ಉತ್ಪನ್ನದ ಮೌಲ್ಯ ಹೆಚ್ಚಾಗೇ ಇರುತ್ತದೆ, ಅಲ್ಲವೇ. ಇಂಥ ಹೆಚ್ಚುವರಿಯನ್ನೇ ಆರ್ಥಿಕ ಬಾಡಿಗೆ ಎನ್ನಲಾಗುತ್ತದೆ. ಈ ಪ್ರಸ್ತಾಪವನ್ನು ದೃಷ್ಟಾಂತದೊಡನೆ ಇನ್ನೂ ಸರಳಗೊಳಿಸೋಣ.

ಕೆಳಗಿನ ತಃಖ್ತೆಯನ್ನು ಪರಿಶೀಲಿಸಿ.



ಅ ಮತ್ತು ಆ ಎಂಬ ಎರಡು ತುಂಡು ಭೂಮಿಗಳು ವಿಸ್ತೀರ್ಣದಲ್ಲಿ ಒಂದೇ ಆಗಿದೆ. ಆದರೆ ಅವುಗಳ ಫಲೋತ್ಪಾದಕತೆಯಲ್ಲಿ ಅಸಮತೆ ಇದೆ. ಎರಡು ತುಂಡು ಭೂಮಿಗಳಿಗೂ ಒಂದೇ ರೀತಿಯಲ್ಲಿ ವ್ಯವಸಾಯ ಮಾಡಲಾಗಿರುತ್ತದೆ. ಮಾಡಿದ ವೆಚ್ಚ ಒಂದೇ ಇರುತ್ತದೆ. ಅಂದರೆ, ೨,೦೦೦ ರೂಪಾಯಿಗಳ

ವೆಚ್ಚ ಪ್ರತಿಯೊಂದು ತುಣುಕಿಗೂ ಮಾಡಲಾಗಿರುತ್ತದೆ. ಹಾಗೂ ಉತ್ಪನ್ನವನ್ನು ಮಾರುವ ಬೆಲೆಯಲ್ಲೂ ಯಾವ ವ್ಯತ್ಯಾಸವೂ ಇಲ್ಲ. ವ್ಯತ್ಯಾಸ ಎಲ್ಲಿದೆ ಅಂದರೆ, ಒಟ್ಟು ಉತ್ಪನ್ನದಲ್ಲಿ, ಅ ಭೂಮಿ ೨೫ ಕ್ವಿಂಟಲ್ ಬತ್ತ ಬೆಳೆದರೆ, ಆ ಭೂಮಿ ೨೦ ಕ್ವಿಂಟಲ್‌ಗಳಷ್ಟು ಮಾತ್ರ ಫಸಲನ್ನು ಬೆಳೆದಿದೆ. ಇದರಿಂದಾಗಿ ಉತ್ಪನ್ನವನ್ನು ಒಂದೇ ಬೆಲೆಗೆ ಮಾರಿದರೂ ಒಟ್ಟು ಮಾರಾಟ ಮೌಲ್ಯ ಎರಡು ಭೂಮಿಗಳಿಗೂ ಬೇರೆ ಬೇರೆ ಇದೆ. (ಅ ಭೂಮಿಗೆ ೨೫೦೦ ರೂ.ಗಳು ಆ ಭೂಮಿಗೆ ೨,೦೦೦ ರೂಗಳು) ಆದ್ದರಿಂದಲೇ ಈ ಎರಡು ಭೂಮಿಗೂ ಇರುವ ಆದಾಯದಲ್ಲಿ ವ್ಯತ್ಯಾಸ ಇರುವುದು. ಅ ಭೂಮಿಯು ಐನೂರು ರೂಪಾಯಿಗಳ ಆದಾಯ ಪಡೆದರೆ ಆ ಭೂಮಿಗೆ ಆದಾಯವೇ ಇಲ್ಲ, ಸಧ್ಯಕ್ಕೆ ನಷ್ಟವೂ ಇಲ್ಲ. ಅಂದರೆ, ಆ ಭೂಮಿಗೆ ಹೋಲಿಸಿದಾಗ ಅ ಭೂಮಿಗೆ ಆರ್ಥಿಕ ಬಾಡಿಗೆ ಉಂಟಾಗಿದೆ. ಅಂಥ ಆರ್ಥಿಕ ಬಾಡಿಗೆಯ ಪ್ರಮಾಣ ೫೦೦ ರೂಪಾಯಿಗಳು. ಆ ಭೂಮಿಗೆ ಬಾಡಿಗೆ ಇಲ್ಲ. ಆದ್ದರಿಂದ ಅದು "ಬಾಡಿಗೆ ಇಲ್ಲದ

ಭೂಮಿ"

ಅಥವಾ "ಅಂಚಿನ ಭೂಮಿ" ಇನ್ನೊಂದು ರೀತಿಯಲ್ಲಿ ಹೇಳಿದರೆ, ಆ ಭೂಮಿಯ ಆದಾಯ ಲಾಭ ಮತ್ತು ನಷ್ಟಗಳ ನಡುವಿನ ಒಂದು ಅಂಚಿನಲ್ಲಿ ಇರುತ್ತದೆ.

ಯಾವ ಭೂಮಿಗೆ ಆರ್ಥಿಕ ಬಾಡಿಗೆಯ ಉತ್ಪನ್ನ ಇದೆಯೋ ಅಂಥ ಭೂಮಿಯನ್ನು "ಅಂಚಿನ ಮೇಲೆ ಇರುವ" ಭೂಮಿ ಎಂದು ಹೇಳಲಾಗುತ್ತದೆ. ಯಾವ ಜಮೀನಿನ ಒಟ್ಟು ಉತ್ಪನ್ನದ ಮೌಲ್ಯ ಮಾಡಿದ ವೆಚ್ಚಕ್ಕಿಂತ ಕಡಿಮೆ ಇದ್ದರೆ, ಅಂಥ ಭೂಮಿಯನ್ನು "ಅಂಚಿನ ಕೆಳಗೆ ಇರುವ" ಭೂಮಿ ಎಂದು ಕರೆಯಲಾಗುತ್ತದೆ.

ಆರ್ಥಿಕ ಬಾಡಿಗೆಯನ್ನು ಅಂದಾಜು ಮಾಡುವುದರಿಂದ ಕೆಲವು ಉಪಯುಕ್ತತೆಗಳು ಇವೆ:



(ಅ) ಬಾಡಿಗೆಗೆ ಪಡೆಯುವವನಿಗೆ ಇರುವ ಉಪಯೋಗ ಏನೆಂದರೆ, ಅವನು ಯಾವುದೇ ಒಂದು ಭೂಮಿಗೆ ಅಥವಾ ಭೂಮಿಯ ತುಂಡಿಗೆ ಕೊಡಲು ಸಿದ್ಧಾನಾಗಿರುವ ಬಾಡಿಗೆಯನ್ನು ನಿರ್ಧರಿಸಬಹುದು.

(ಆ) ಭೂಮಿಯನ್ನು ಬಾಡಿಗೆಗೆ ಕೊಡುವವನಿಗೆ ಇರುವ ಉಪಯೋಗ ಏನೆಂದರೆ, ತನ್ನ ಜಮೀನನ್ನು ಬಳಕೆಗೆ ಕೊಡುವಾಗ ಯಾವ ಬೆಲೆಯನ್ನು ತಾನು ಒಪ್ಪಿಕೊಳ್ಳಬಹುದು ಎಂಬುದನ್ನು ನಿರ್ಧರಿಸಲು ನೆರವಾಗುತ್ತದೆ.

ಅಂದರೆ, ಆರ್ಥಿಕ ಬಾಡಿಗೆಯ ಅಂದಾಜು ಭೂಮಿಯನ್ನು ಬಾಡಿಗೆಗೆ ಪಡೆಯುವವನಿಗೂ ಹಾಗೂ ಭೂಮಿಯ ಒಡೆಯನಿಗೂ ಸಹಾಯ ಆಗುತ್ತದೆ. ಒಬ್ಬನಿಗೆ ಅಂಶದ ಬೆಲೆ ಏನು ಕೊಡಲು ಸಿದ್ಧ ಎಂಬುದನ್ನು ನಿರ್ಧರಿಸಲು ಸಹಾಯಕವಾದರೆ, ಇನ್ನೊಬ್ಬನಿಗೆ ಯಾವ ಅಂಶದ ಬೆಲೆಗೆ ಬಾಡಿಗೆಗೆ ಕೊಡಲು ಒಪ್ಪಿಕೊಳ್ಳಬಹುದು ಎಂಬುದನ್ನು ನಿರ್ಧಾರ ತಾಳಲು ಸಹಾಯಕ ಆಗಿದೆ.

ಭೂಮಿಗೆ ಸಂಬಂಧ ಪಟ್ಟಂತೆ ಆರ್ಥಿಕ ಬಾಡಿಗೆಯ ವಿಷಯ ಸರಳವಾಗೇ

ಇದೆ. ಆದರೆ ಈಗ ‘ಬಾಡಿಗೆ’ ಎಂಬ ಸಂಭಾವನೆ ಭೂಮಿಗೆ ಒಂದಕ್ಕೇ ಅಲ್ಲದೇ ಇತರ ಉತ್ಪಾದನಾ ಅಂಶಗಳಿಗೂ ಅನ್ವಯ ಆಗುತ್ತದೆ. ಇಷ್ಟು ನಿಮ್ಮ ಪಠ್ಯ ಕ್ರಮದ ಅಗತ್ಯಗಳಿಗೆ ಸಾಕು. ಇನ್ನೂ ಸ್ವಲ್ಪ ಈ ಬಗ್ಗೆ ಹೆಚ್ಚಾಗಿ ತಿಳುವಳಿಕೆ ಪಡೆಯಬೇಕು ಅನ್ನುವವರಿಗೆ ನಾವು ಸ್ವಲ್ಪ ದೂರ ಈ ವಿಷಯವನ್ನು ಮುಂದುವರಿಸುತ್ತೇವೆ.

ಮೊದಲು ಬಾಡಿಗೆ ಎಂಬ ಸಂಭಾವನೆ ಭೂಮಿಗೆ ಮಾತ್ರ ಇದೆ ಎನ್ನುವ ಭಾವನೆ ಅರ್ಥಶಾಸ್ತ್ರಜ್ಞರು ಹೊಂದಿದ್ದರು. ಏಕೆಂದರೆ, ಅವರು ಭೂಮಿ ಒಂದೇ ಪೂರೈಕೆಯಲ್ಲಿ ಸ್ಥಿರವಾಗೇ ಇರುವುದು ಎಂದು ಭಾವಿಸಿ ಕೊಂಡಿದ್ದರು. ನಂತರ ಕಾಲಕ್ರಮೇಣ, ಸ್ವಲ್ಪ ಕಾಲಕ್ಕೆ ಆದರೂ ಯಾವುದೇ ಉತ್ಪಾದನಾ ಅಂಶದ ಪೂರೈಕೆ ಸ್ಥಿರವಾಗಿ ಇದ್ದರೆ, ಅಂಥ ಎಲ್ಲ ಉತ್ಪಾದನಾ ಅಂಶಗಳಿಗೂ ಬಾಡಿಗೆ ಸಿದ್ಧಾಂತವನ್ನು ಅನ್ವಯಿಸಬಹುದು ಎಂಬುದನ್ನು ಕಂಡರು. ಅಂದರೆ, ಇಂಥ ಸನ್ನಿವೇಶದಲ್ಲಿ ಅಲ್ಪಕಾಲಕ್ಕಾದರೂ ಪೂರೈಕೆ ಸ್ಥಿರವಾಗಿ ಇರುತ್ತದೆ. ಆದರೆ ದೀರ್ಘಾವಧಿಯಲ್ಲಿ ಪೂರೈಕೆಯನ್ನು ಹೆಚ್ಚಿಸಬಹುದು ಎಂಬುದೇನೋ ನಿಜ. ಅಷ್ಟರಲ್ಲಿ ತಕ್ಷಣ ಬೇಡಿಕೆ ಮೇಲೇರಿರುತ್ತದೆ. ಹಾಗೆ ಅಲ್ಪಾವಧಿಯಲ್ಲಿ ಶ್ರಮ ಮತ್ತು ಬಂಡವಾಳಕ್ಕೂ ಬಾಡಿಗೆ ಇರುವುದನ್ನು ಆಲ್‌ಫ್ರೆಡ್ ಮಾರ್ಷಲ್



ಕಂಡು, ಅಂಥ ಬಾಡಿಗೆಗೆ, "ಬಾಡಿಗೆಯಂಥ ಬಾಡಿಗೆ" ಎಂದು ಹೆಸರಿಟ್ಟನು. ಅಂದರೆ "ಬಾಡಿಗೆಯಂಥ ಬಾಡಿಗೆ" ಏನಿದ್ದರೂ, ಬಂಡವಾಳ ಮತ್ತು ಶ್ರಮಕ್ಕೆ ಅಲ್ಪಾವಧಿಯಲ್ಲಿ ಬೇಡಿಕೆ ತಕ್ಷಣ ಮೇಲೆ ಏರಿದ್ದರಿಂದ ಉಂಟಾದ ಬಾಡಿಗೆ ಅಷ್ಟೇ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ಆದರೆ ದೀರ್ಘಾವಧಿಯಲ್ಲಿ ಈ ಅಂಶಗಳ ಪೂರೈಕೆ ಹೆಚ್ಚುತ್ತದೆ. ಅಂಥ ಸನ್ನಿವೇಶದಲ್ಲಿ ಇಂಥ ಬಾಡಿಗೆ ಏನೂ ಇರುವುದಿಲ್ಲ ಎಂಬುದನ್ನೂ ಜ್ಞಾಪಕದಲ್ಲಿ ಇಟ್ಟುಕೊಂಡಿರಬೇಕು. ಆದ್ದರಿಂದ ಭೂಮಿಗೆ ಆರ್ಥಿಕ ಬಾಡಿಗೆ ಸ್ಥಿರವಾದ ಸಂಗತಿ. ಆದರೆ, ಬಂಡವಾಳ

ಮತ್ತು ಶ್ರಮಕ್ಕೆ ಇದೇನಿದ್ದರೂ ತಾತ್ಕಾಲಿಕವಾದದ್ದು. ಹಾಗೆ ಏಕಸ್ವಾಮ್ಯ ಪಡೆದಿರುವವನು, ಸಂಪಾದನೆ ಮಾಡಲು ಲಾಭ ಲಾಭವಾಗಿರದೇ ಬಹಳ ಮಟ್ಟಿಗೆ ಬಾಡಿಗೆ ಆಗಿರುತ್ತದೆ ಎಂಬುದನ್ನು ನೀವು ಮನಗಾಣಬಹುದು. ಏಕೆಂದರೆ, ಅವನು ಈಗ ಇರುವ ಬೆಲೆಗಿಂತಲೂ ಹೆಚ್ಚು ಮಟ್ಟದ ಬೆಲೆಯನ್ನು ಪಡೆಯುವ ಉದ್ದೇಶದಿಂದ ತಾನು ಉತ್ಪಾದಿಸುವ (ಇಲ್ಲವೇ ಮಾಡುವ) ವಸ್ತುಗಳಿಗೆ ಕೃತಕವಾಗಿ ವಿರಳತೆ (ಅಥವಾ ಕೊರತೆ)ಯನ್ನು ಉಂಟು ಮಾಡಿರುತ್ತಾನೆ.

ಇನ್ನೊಂದು ಅಂಶವನ್ನು ಗಮನಿಸಬೇಕಾಗುತ್ತದೆ. ಯಾವುದೇ ಕಾಲದಲ್ಲಿ ಯಾವುದೇ ಪೇಟೆಯಲ್ಲಿ ಒಂದು ವಸ್ತುವಿನ ಬೆಲೆ ಅಧಿಕವಾದರೆ, ಅಂಥಬೆಲೆ, ಹೆಚ್ಚಿನ, ಉತ್ಪಾದನಾ ಅಂಶಗಳನ್ನು ಬಳಸಿ ಅದೇ ವಸ್ತುವನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪಾದನೆ ಮಾಡುವಂತೆ ಪ್ರಚೋದಿಸುತ್ತದೆ. ಇದು ಸ್ವಾಭಾವಿಕವಾದ ಸಂಗತಿ. ಇದರ ಪರಿಣಾಮ ಏನೆಂದರೆ ಉತ್ಪಾದನಾ ಅಂಶಗಳಿಗೆ ಅಧಿಕ ಬಾಡಿಗೆಯನ್ನು ಕೊಡಬೇಕಾಗುತ್ತದೆ. ಅಂದರೆ, ಅಧಿಕಬಾಡಿಗೆ ಕೊಡಬೇಕಾಗುವುದಕ್ಕೆ ಕಾರಣ ಏನಿದ್ದರೂ ವಸ್ತುಗಳಿಗೆ ಬರುವ ಅಧಿಕಬೆಲೆಯೇ ಎಂಬುದನ್ನು ಮರೆಯಬಾರದು. ಯಾವುದೇ ಕಾರಣಕ್ಕಾದರೂ, ಅಧಿಕಬಾಡಿಗೆ ಕೊಡುವ ಕಾರಣದಿಂದಲೇ
ವಸ್ತುಗಳಿಗೆ ಕೊಡುವ ಬೆಲೆ ಅಧಿಕವಾಗಿರುತ್ತದೆ ಎಂದು ತಪ್ಪುತಿಳಿಯಬಾರದು.

೩ ವೇತನ : ಶ್ರಮ ಒಂದು ಉತ್ಪಾದನಾ ಅಂಶ ಮತ್ತು ಅದರ ಬಳಕೆಗಾಗಿ ಕೊಡುವ ಸಂಭಾವನೆ ವೇತನ. ಕೆಲಸಗಾರ ಮಾಡಿದ ಸೇವೆಗೆ ಪ್ರತಿಫಲವಾಗಿ ಉದ್ಯೋಗಾಂತ (ನೌಕರಿಕೊಡುವವನು) ಹಣವನ್ನು ಕೊಡುವುದೇ ವೇತನ. ವೇತನ ಎಂಬ ಪದದಲ್ಲಿ, ಕೂಲಿ, ಸಂಬಳ, ತರಗು



ಮುಂತಾದ ಶ್ರಮ ಪಡೆದಕ್ಕಾಗಿ ಯಾವುದೇತರನಾದ ಹಣಸಂದಾಯ ಎಲ್ಲವೂ

ಸೇರಿರುತ್ತದೆ. ಶ್ರಮ ಎಂದರೆ ಇಲ್ಲಿ ಕಾರ್ಮಿಕರ ಶ್ರಮ ಅಲ್ಲದೇ, ಕಛೇರಿ ಕೆಲಸಗಾರರು ಹಾಗೂ ವೈದ್ಯರು, ವಕೀಲರು ಯಾವುದೇ ತೆರನಾದ ಕಸಬುದಾರರು ವ್ಯಾಪಾರಿಗಳು, ಕುಶಲಕಲೆಗಾರರು, ತಯಾರಕರು. ವ್ಯವಸ್ಥಾಪಕರು, ಆಡಳಿತಗಾರರು, ಮಾಡುವಂತ ಎಲ್ಲ ತರಹದಶ್ರಮವೂ ಸೇರಿರುತ್ತದೆ.

ವೇತನವನ್ನು ಗಂಟೆಗೆ ಇಷ್ಟು ಎಂದೋ ಅಥವಾ ದಿನಕ್ಕೆ ಅಥವಾ ವಾರಕ್ಕೆ ಇಲ್ಲವೇ ತಿಂಗಳಿಗೆ ಇಷ್ಟು ಎಂದು ನಿರ್ದಿಷ್ಟದರದಲ್ಲಿ ಕೊಡಲಾಗುತ್ತದೆ ಕೆಲಸಗಾರ ಹಾಗೂ ಅವನ ಒಡೆಯ ಇಬ್ಬರೂ ಮಾಡಿಕೊಂಡ ಒಪ್ಪಂದದ ಮೇರೆ. ಒಂದು ನಿರ್ದಿಷ್ಟ ಕಾಲಶ್ರಮಕ್ಕೆ ಇಷ್ಟು ಪರಿಹಾರ ಎಂದು ವೇತನವನ್ನು ಕೊಡಲಾಗುತ್ತದೆ. ವೇತನವನ್ನು ತುಂಡುಕೆಲಸಕ್ಕೆ ಇಷ್ಟು ಎಂದೂ ಕೊಡಲಾಗುತ್ತದೆ. ಒಂದು ಗೊತ್ತಾದ ಪ್ರಮಾಣದ ಶ್ರಮ (ಕೆಲಸ ಮಾಡಿದಕ್ಕೆ) ಕ್ಕಾಗಿ ಪಾವತಿ ಮಾಡುವ ಹಣದ ಮೌಲ್ಯವೇ ವೇತನ. ಆದರೆ "ನಿಜ ವೇತನ" ಎಂದರೆ, ಅಂಥ ಹಣದ ರೂಪದ ವೇತನ ಎಷ್ಟು ವಸ್ತುಗಳನ್ನು ಮತ್ತು ಸೇವೆಗಳನ್ನು ಕೊಳ್ಳಲು ಶಕ್ತವಾಗಿದೆ ಎಂಬುದೇ ಎಲ್ಲ ಕೆಲಸಗಾರನೂ ತನ್ನ ಹಣದ ವೇತನ (ಅಂದರೆವೇತನವಾಗಿ ಬಂದ ಹಣ) ಎಷ್ಟು ಪ್ರಮಾಣದ ವಸ್ತುಗಳನ್ನು ಕೊಳ್ಳಲು ಶಕ್ತವಾಗಿದೆ ಎಂಬುದರ ಬಗ್ಗೆ ಆಸಕ್ತನಾಗೇ ಇರುತ್ತಾನೆ. ಏಕೆಂದರೆ ಅವನು ಹಾಗೆ ಆಸಕ್ತಿ ವಹಿಸದಿದ್ದಲ್ಲಿ ಅವನ ಹಣದ ವೇತನಕ್ಕಿಂತ ಜೀವನ ವೆಚ್ಚ ಹೆಚ್ಚಾದರೆ ಅವನ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗುತ್ತದೆ. ಜೀವನ ವೆಚ್ಚಹೆಚ್ಚಾದಾಗ ಅವನ ನಿಜ ವೇತನ ಕಡಿಮೆ ಆಗಿರುತ್ತದೆ. ಅಥವಾ ಅವನ ಕೊಳ್ಳುವ ಸಾಮರ್ಥ್ಯ ಕಡಿಮೆ ಆಗಿರುತ್ತದೆ. ಅಥವಾ ಅವನ ಮಾಮೂಲು ಅಗತ್ಯ ವಸ್ತುಗಳನ್ನು ಕೊಳ್ಳಲೂ ಸಹ ಅವನ ವೇತನ ಹಣ ಸಾಕಾಗುವುದಿಲ್ಲ.

ಇಂಥ ಪರಿಸ್ಥಿತಿಯಲ್ಲಿ ಅವನು ಹೆಚ್ಚು ವೇತನ ಪಡೆಯಲು ಸ್ವಾಭಾವಿಕವಾಗಿ ಇಚ್ಛಿಸುತ್ತಾನೆ. ಕಾರ್ಮಿಕರ ಸಂಘಗಳು ಇದೇ ಉದ್ದೇಶಗಳಿಗಾಗಿ ದುಡಿಯುತ್ತಿರುತ್ತವೆ. ಏಕೆಂದರೆ ಕಾರ್ಮಿಕರ ಸಂಘಗಳ ಧ್ಯೇಯೋದ್ದೇಶಗಳಲ್ಲಿ

ತನ್ನ ಸದಸ್ಯ ಕಾರ್ಮಿಕರ ವೇತನ ಮಟ್ಟವನ್ನು ಹೆಚ್ಚಿಸುವುದು ಒಂದಾಗಿದೆ.

ಶ್ರಮದ ಫಲೋತ್ಪಾದಕತೆಗೆ ತಕ್ಕಂತೆ ವೇತನ ಹೆಚ್ಚಾಗುವಂತಿದ್ದರೆ, ಜೀವನ ವೆಚ್ಚ ಹೆಚ್ಚಾಗುವುದಿಲ್ಲ. ಏಕೆಂದರೆ ಅದರಿಂದಾಗಿ ಅಧಿಕ ಪ್ರಮಾಣದ

-೨೩೮-

ವಸ್ತುಗಳು ಉತ್ಪಾದನೆ ಆಗುತ್ತವೆ. ಆದರೆ ವೇತನ ಹೆಚ್ಚಾದಂತೆಲ್ಲಾ ಅದಕ್ಕೆ ಸರಿಸಮನಾಗಿ ವಸ್ತುಗಳ ಉತ್ಪನ್ನ ಹೆಚ್ಚಾಗದೇ ಇದ್ದರೆ, ಅಂಥ ಸನ್ನಿವೇಶದಲ್ಲಿ ಜೀವನ ವೆಚ್ಚ ಹೆಚ್ಚಾಗುವುದು. ಏಕೆಂದರೆ ವೇತನ ಹೆಚ್ಚಾದ ಪರಿಣಾಮವಾಗಿ ಕೆಲಸಗಾರನ ಬಳಿ ಹೆಚ್ಚು ಪ್ರಮಾಣದ ಹಣದ ವೇತನ ಇರುತ್ತದೆ. ಖರ್ಚು ಮಾಡಲು ಸಿದ್ಧವಾಗಿ ಇರುತ್ತದೆ. ಆದರೆ ಅದಕ್ಕೆ ತಕ್ಕಂತೆ ವಸ್ತುಗಳ ಉತ್ಪನ್ನ ಇರುವುದಿಲ್ಲ. ಆದ್ದರಿಂದ ಕೆಲವೇ ವಸ್ತುಗಳಿಗೆ ಹಲವಾರು ಜನರು ಬೇಡಿಕೆ ಸಲ್ಲಿಸುತ್ತಾರೆ. ಪರಿಣಾಮವಾಗಿ ಬೆಲೆಗಳು ಏರುತ್ತವೆ. ಉತ್ಪನ್ನ ಸಾಲದಾದ್ದರಿಂದ ಪೂರೈಕೆ ಬೇಡಿಕೆಗೆ ಅನುಗುಣವಾಗಿ ಇರುವುದಿಲ್ಲ. ಬೆಲೆ ಏರಿದರೆ, ಗ್ರಾಹಕ (ಕೊಳ್ಳುವವನು) ವಸ್ತುಗಳಿಗೆ ಹೆಚ್ಚು ಬೆಲೆಯನ್ನು ತೆತ್ತು, ಶ್ರಮದ ಹೆಚ್ಚುವರಿ ವೆಚ್ಚವನ್ನು ತುಂಬಿಕೊಡುತ್ತಾನೆ. ಅಂದರೆ ಶ್ರಮಗಾರ ಫಲೋತ್ಪಾದಕನಾಗಿ ಇರದೇ ಇದ್ದರೆ, ಗ್ರಾಹಕ ವಸ್ತುಗಳಿಗೆ ಹೆಚ್ಚು ಬೆಲೆಯನ್ನು ತೆರಬೇಕಾಗುತ್ತದೆ.

ಕೆಲಸಗಾರರೂ ಸಹ ಇನ್ನೊಂದು ದೃಷ್ಟಿಯಲ್ಲಿ ಗ್ರಾಹಕರೂ ಆಗಿರುತ್ತಾರೆ. ಎಂದು ನಾವು ಶ್ರಮವನ್ನು ಉತ್ಪಾದನಾ ಅಂಶವಾಗಿ ವ್ಯಾಸಂಗ ಮಾಡುವಾಗ ಹೇಳಿದ್ದೇವೆ. ಅಂದರೆ ಬೆಲೆ ಹೆಚ್ಚಾದ ಪರಿಸ್ಥಿತಿಯಲ್ಲಿ ಕೆಲಸಗಾರರೂ ಸಹ ತಾವು ಸದಾ ಕೊಳ್ಳುತ್ತಿದ್ದ ಪ್ರಮಾಣದ ಜೀವನಾವಶ್ಯಕ ವಸ್ತುಗಳಿಗೆ ಹಿಂದೆ ಮಾಡುತ್ತಿದ್ದಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ಹಣವನ್ನು ಖರ್ಚುಮಾಡಬೇಕಾಗುತ್ತದೆ. ಹೀಗೆ ಫಲೋತ್ಪಾದಕತೆ ಸಮನಾದ ಪ್ರಮಾಣದಲ್ಲಿ ಹೆಚ್ಚಾಗದೇ ಬರಿ ಹಣದ ವೇತನದ ಮಟ್ಟ ಹೆಚ್ಚಾದರೆ, ಅದರ ಪರಿಣಾಮವಾಗಿ ನಿಜ

ವೇತನ ಕಡಿಮೆ ಆಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ, ಹಣದ ವೇತನ ಹೆಚ್ಚಾಗಬೇಕಿದ್ದರೆ, ಶ್ರಮದ ಫಲೋತ್ಪಾದಕತೆ ಉತ್ತಮಗೊಳ್ಳಬೇಕು, ಇಲ್ಲವೆ ಶ್ರಮಜೀವಿಗಳ ಸಂಖ್ಯೆ ಕಡಮೆ ಆಗಬೇಕು. ಅಂದರೆ, ಶ್ರಮ ಜೀವಿಗಳನ್ನು ಕಡಮೆ ಸಂಖ್ಯೆಯಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳಬೇಕು. ಅಥವಾ ಹೆಚ್ಚು ಸಂಖ್ಯೆಯಲ್ಲಿದ್ದ ಸಂಖ್ಯೆಯನ್ನು ಕಡಮೆ ಮಾಡಲು ಕೆಲವರನ್ನು ಕೆಲಸದಿಂದ ವಜಾ ಮಾಡ ಬೇಕಾಗುತ್ತದೆ.

ಕನಿಷ್ಠ ವೇತನ ಮತ್ತು ನ್ಯಾಯವಾದ ವೇತನ : ಶ್ರಮ ಜೀವಿಗಳಿಗೆ ಕೊಡುವ ವೇತನ ಅವರು ಮಾಡುವ ಕೆಲಸದ ಪ್ರಮಾಣಕ್ಕೆ ಅನುಗುಣವಾಗಿ ಇರಬೇಕು. ಹಾಗೂ ಅವರ ಜೀವನ ಸ್ಥಿತಿಗಳು ಮತ್ತು ಅವಶ್ಯಕತೆಗಳಿಗೆ ಸರಿಹೊಂದುವಂತೆ



ಇರಬೇಕು. ಹೀಗೆ ವೇತನ ನಿಗದಿ ಮಾಡುವಾಗ ಎರಡೂ ದೃಷ್ಟಿಯನ್ನು ಪರಿಗಣನೆ ಮಾಡಿ ನಿಗದಿ ಮಾಡಿದರೆ ಕೆಲಸಗಾರರಲ್ಲಿ ದಕ್ಷತೆ ಉಂಟಾಗುತ್ತದೆ.

ಕನಿಷ್ಠ ವೇತನ : ಒಂದು ರಾಜ್ಯದ ಸರ್ಕಾರ. ಒಂದು ಕೈಗಾರಿಕೆಯ ಪ್ರತಿಯೊಂದು ವರ್ಗದ ಕೆಲಸಗಾರರಿಗೂ ಒಂದು ಸ್ಥಿರ ಪ್ರಮಾಣದ ಮೂಲ ವೇತನಗಳನ್ನು ನಿಗದಿ ಮಾಡಿದರೆ, ಹಾಗೆ ನಿಗದಿ ಮಾಡಿದ ವೇತನವನ್ನು ಕನಿಷ್ಟವೇತನ ಎನ್ನಲಾಗುತ್ತದೆ. ಅಂಥ ಕೈಗಾರಿಕೆಯಲ್ಲಿ ಇರುವ ಉತ್ಪಾದನಾಸಂಸ್ಥೆಗಳು ಇದಕ್ಕಿಂತ ಕಡಮೆ ಮಟ್ಟದಲ್ಲಿ ತಮ್ಮ ಕೆಲಸಗಾರರಿಗೆ ವೇತನ ಕೊಡುವ ಹಾಗಿರುವುದಿಲ್ಲ. ಹಾಗೇನಾದರೂ ಕಡಮೆ ಮಟ್ಟದ ವೇತನ ಕೊಟ್ಟರೆ ಅದು ಶಿಕ್ಷಾರ್ಹವಾದ ಅಪರಾಧ ಆಗುತ್ತದೆ. ಸರ್ಕಾರಗಳು ಸಾಮಾನ್ಯವಾಗಿ ಪ್ರತಿಯೊಂದು ಕೈಗಾರಿಕೆಗೂ ಒಂದೊಂದು ಮಟ್ಟದ (ಆ ಕೈಗಾರಿಕೆಯ ವಿಶಿಷ್ಟಸಮಸ್ಯೆಗಳನ್ನು ಗಣನೆಗೆ ತೆಗೆದುಕೊಂಡು) ಕನಿಷ್ಠ ವೇತನವನ್ನು ನಿಗದಿ ಮಾಡಿರುತ್ತದೆ. ಆದ್ದರಿಂದಲೇ ರಾಸಾಯನಿಕ ಕೈಗಾರಿಕೆಗಳ ಕನಿಷ್ಠ ವೇತನ, ಯಂತ್ರಶಾಸ್ತ್ರದ ಕೈಗಾರಿಕೆಗಳಿಗೆ ಒಂದು ಕನಿಷ್ಠ ವೇತನಮಟ್ಟವನ್ನು ನಿಗದಿ ಮಾಡಿರುವುದನ್ನು

ಕಾಣುವುದು. ಸರ್ಕಾರಗಳು ಹೀಗೆ ಕನಿಷ್ಠ ವೇತನವನ್ನು ನಿಗದಿ ಮಾಡಿದರೆ ಅದನ್ನು "ಕಾನೂನುಬದ್ಧ ಕನಿಷ್ಠ ವೇತನ" ಅಥವಾ "ಕಾಯಿದೆ ಬದ್ಧ ಕನಿಷ್ಠ ವೇತನ" ಎನ್ನಲಾಗುತ್ತದೆ. ಆದರೂ ಕೆಲವು ಕೈಗಾರಿಕೆಗಳಲ್ಲಿ ಇರುವ ಪ್ರತಿಯೊಂದು ವ್ಯವಹಾರ ಉದ್ದಿಮೆಗಳ ಕೆಲಸಗಾರರು ಮತ್ತು ಆಡಳಿತಗಳ ನಡುವೆ ಆದ ಒಂದು ಒಪ್ಪಂದದ ಮೂಲಕ ಕನಿಷ್ಠ ವೇತನವನ್ನು ನಿಗದಿ ಆದರೆ, ಅಂಥ ಕನಿಷ್ಠ ವೇತನವನ್ನು "ಒಪ್ಪಂದದ ಕನಿಷ್ಠ ವೇತನ" ಎನ್ನಲಾಗುತ್ತದೆ.

ಕನಿಷ್ಠ ವೇತನ ಮಟ್ಟವನ್ನು ನಿಗದಿ ಮಾಡುವಾಗ ಗಮನ ಕೊಡಬೇಕಾದ ಮೂಲ ತತ್ವಗಳು ಎರಡು : (ಅ) ಅಂಥ ವೇತನಮಟ್ಟ, ಕೆಲಸಗಾರ ತನ್ನ ವೇತನದಿಂದ ತನಗೆ ಬೇಕಾದ ಎಲ್ಲ ಜೀವನಾವಶ್ಯಕಗಳನ್ನು ಕೊಳ್ಳಲು ಶಕ್ತನಾಗಿರಲೂ ಜತೆಗೆ ಕೆಲಸಮಾಡಲು ಸಾಕಷ್ಟು ಸುಸ್ಥಿತಿಯಲ್ಲಿ ಇರಲೂ ಸಾಕಷ್ಟು ಪ್ರಮಾಣದಲ್ಲಿ ಹಣವನ್ನು ಒದಗಿಸುವಂತಿರಬೇಕು. (ಆ) ಅಂಥ ವೇತನ ಸಾಧ್ಯವಾದ ಮಟ್ಟಿಗೂ ಅವನಿಗೆ ಕೆಲಸ ಮಾಡುವಂತೆ ಪ್ರಚೋದಕವಾಗಿಯೂ, ಪ್ರೋತ್ಸಾಹಕರವಾಗಿಯೂ ಇರಬೇಕು. ಇಂಥ ತತ್ವಗಳನ್ನು



ಗಣನೆ ಮಾಡದೇ ನಿಗದಿಯಾದ ವೇತನ ಮಟ್ಟ ಕನಿಷ್ಠ ಮಟ್ಟದ ವೇತನ ಆಗುವುದಿಲ್ಲ.

ಕನಿಷ್ಠ ವೇತನದ ಮಟ್ಟದಲ್ಲಿ ಕೈಗಾರಿಕೆಯಿಂದ ಕೈಗಾರಿಕೆಗೆ ವ್ಯತ್ಯಾಸ ಇರುತ್ತದೆ. ಏಕೆಂದರೆ, ನಿಗದಿ ಮಾಡುವಾಗ, ನಿರ್ದಿಷ್ಟ ಕೈಗಾರಿಕೆಯ ಲಾಭ ಮಾಡುವ ಪ್ರಮಾಣ ಹಾಗೂ ಸಾಮರ್ಥ್ಯವನ್ನೂ ಜತೆಗೆ ಅಲ್ಲಿನ ಸನ್ನಿವೇಶದಲ್ಲಿ ಕೆಲಸ ಮಾಡುವಾಗ ಇರುವ ಸಂಬಂಧ ಪಟ್ಟ ಕಂಟಕ ಮತ್ತು ಅಪಾಯಗಳನ್ನೂ ಗಣನೆಗೆ ತೆಗೆದು ಕೊಂಡಿರಲಾಗುತ್ತದೆ. ಲಾಭ ಮಾಡುವ ಸಾಮರ್ಥ್ಯ ಹಾಗೂ ಕೆಲಸ ಮಾಡುವ ಸನ್ನಿವೇಶದಲ್ಲಿ ಇರುವ ಅಪಾಯ ಸಂಭವಗಳು

ಕೈಗಾರಿಕೆಯಿಂದ ಕೈಗಾರಿಕೆಗೆ ವ್ಯತ್ಯಾಸ ಇರುತ್ತದೆ, ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕೆಲವು ಬಾರಿ ಇಡೀ ದೇಶದ ಎಲ್ಲ ವರ್ಗಗಳ ಕೆಲಸಗಾರರಿಗೂ ಅನ್ವಯ ಆಗುವಂತೆ ಕನಿಷ್ಠವೇತನ ಮಟ್ಟವನ್ನು ನಿಗದಿ ಮಾಡಿದರೆ ಆಗ ಅದನ್ನು "ರಾಷ್ಟ್ರೀಯ ಕನಿಷ್ಠವೇತನ" ಮಟ್ಟ ಎಂದು ಹೇಳಲಾಗುತ್ತದೆ. ಅಂದರೆ, ಹೀಗೆ ನಿಗದಿ ಆದ ಮಟ್ಟದ ವೇತನಗಳನ್ನು ಎಲ್ಲ ವರ್ಗದ ಕೆಲಸಗಾರರಿಗೂ ಕೊಡಬೇಕಾಗುತ್ತದೆ.

ನ್ಯಾಯವಾದ ವೇತನ : ನ್ಯಾಯವಾದ ವೇತನ ಬೇರೆಯೇ ಆಗಿದೆ. ಇಂಥ ವೇತನವನ್ನು ನಿಗದಿ ಮಾಡುವಾಗ, ಕೆಲಸಗಾರನೂ ಒಬ್ಬ ಮನುಷ್ಯ ಅವನಿಗೂ ಅವನದೇ ಆಸೆ ಆಕಾಂಕ್ಷೆಗಳು ಇರುತ್ತದೆ, ಹಾಗೂ ನ್ಯಾಯಸಮ್ಮತ, ಆದರ್ಶಗಳು ಸಮಾನತೆಯನ್ನು ಮತ್ತು ಇತರ ನೈತಿಕ ಭಾವನೆಗಳಿಗೆ ಗಣನೀಯವಾಗಿ ಗಮನಹರಿಸಲಾಗುತ್ತದೆ. ಜತೆಗೆ ಕೆಲಸಗಾರನ ಕರಕೌಶಲ್ಯ ಮತ್ತು ನಿರ್ದಿಷ್ಟ ಕೆಲಸ ಮತ್ತು ಉದ್ಯೋಗಗಳಲ್ಲಿ ಕೆಲಸಗಾರ ಎದುರಿಸಬೇಕಾದ ತೊಂದರೆ ಮತ್ತು ಯಾತನೆಗಳು, ಇಂಥ ಅಂಶಗಳನ್ನು ಗಣನೆತೆಗೆದುಕೊಳ್ಳಲಾಗಿರುತ್ತದೆ. ನ್ಯಾಯ ವೇತನವನ್ನು ನಿಶ್ಚಿತ ದರ್ಜೆಯ ಕೆಲಸಗಳಿಗೆ ನಿಗದಿ ಮಾಡಬಹುದು. ನ್ಯಾಯವೇತನ ಏನಿದ್ದರೂ ಒಂದು ಆದರ್ಶ ವೇತನ. ಆದ್ದರಿಂದ ಬೇರೆ ಆದರ್ಶಗಳನ್ನು ಸಾಧಿಸುವುದು ಎಷ್ಟು ತೊಡಕಾಗಿರುತ್ತದೆಯೋ ಅಷ್ಟೇ ತೊಡಕಾಗಿ ನ್ಯಾಯ ವೇತನವನ್ನು ನಿಗದಿ ಮಾಡುವ ಕೆಲಸವೂ ಇರುತ್ತದೆ ಎಂಬುದನ್ನು ಮರೆಯಬಾರದು.

ಈ ನ್ಯಾಯ ವೇತನ ಯಾರಿಗೆ ನ್ಯಾಯವಾಗಿ ಇರಬೇಕು? ಕಾರ್ಮಿಕನಿಗೆ



ಮಾತ್ರವೇ ಇಲ್ಲ ಉದ್ಯೋಗದಾತನಾದ ಕಾರ್ಖಾನೆಗಳ ಒಡೆಯನಿಗೇ ಇಲ್ಲ ಇಡೀ ಸಮಾಜಕ್ಕೇ? ನ್ಯಾಯವೇತನಗಳನ್ನು ಕೂಡ, ಒಂದು ಕಡೆ ಉದ್ಯೋಗಿಗಳ ಚೌಕಾಶಿ ಮಾಡುವ ಶಕ್ತಿ, ಇನ್ನೊಂದು ಕಡೆ ಉದ್ಯೋಗದಾತನ "ಕೊಡುವ ಸಾಮರ್ಥ್ಯ" ಇಲ್ಲವೇ ಉದ್ಯೋಗಿಗಳ ಚೌಕಾಶಿ ಮಾಡುವ ಶಕ್ತಿಯನ್ನು

ಎದುರಿಸುವ ಸಾಮರ್ಥ್ಯದ ಆಧಾರದ ಮೇಲೆ ನಿರ್ಣಯ ಮಾಡಲಾಗುತ್ತದೆ. ಉದ್ಯೋಗದಾತನ ಕೊಡುವ ಸಾಮರ್ಥ್ಯವನ್ನು ನಿರ್ಣಯಿಸುವ ಅಂಶಗಳು, ಒಂದು, ಅಂಥ ವಸ್ತುವಿನ ಉತ್ಪಾದನಾ ವೆಚ್ಚದ ರಚನೆ, ಎರಡನೆಯದು, ಹಾಗೆ ಮಾರ್ಪಡಿಸಿದ ಬೆಲೆಯನ್ನು ಕೊಡಲು ಗ್ರಾಹಕನ ಒಪ್ಪಿಗೆ. ಅಂದರೆ ಇಂದಿನ ದಿನಗಳಲ್ಲಿ ನ್ಯಾಯವೇತನವನ್ನು ನಿಗದಿ ಮಾಡುವಾಗ ಯಾವುದೇ ಸಂಸ್ಥೆಯ ಅಥವಾ ಇಡೀ ಒಂದು ಕೈಗಾರಿಕೆಯ ಉತ್ಪನ್ನಗಳಿಗೆ ಹೆಚ್ಚಿಸಿದ ಬೆಲೆಯನ್ನು ಕೊಡಲು ಗ್ರಾಹಕನಿಗೆ ಇರುವ ಸಾಮರ್ಥ್ಯ ಹಾಗೂ ಕೊಡುವ ಸಮ್ಮತಿ, ಎರಡನ್ನೂ ಸಹ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಬಗ್ಗೆ ಅಂದರೆ ನ್ಯಾಯವೇತನಗಳ ಬಗ್ಗೆ ಕಾಯಿದೆಗಳನ್ನು ಮಾಡಿದ್ದೇ ಆದರೆ, ಹಾಗೆ ನ್ಯಾಯ ವೇತನವನ್ನು ನಿಗದಿ ಮಾಡುವಾಗ, ಪದಾರ್ಥದ ವೆಚ್ಚರಚನೆ ಮತ್ತು ಉದ್ಯೋಗದಾತನ ಕೊಡುವ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಕನಿಷ್ಟ ವೇತನದ ವಿರುದ್ಧ ನ್ಯಾಯ ವೇತನ : ಕನಿಷ್ಠ ವೇತನ ಇರಬೇಕೇ ಅಥವಾ ನ್ಯಾಯ ವೇತನ ಇರಬೇಕೇ ಎಂಬುದು ಇನ್ನೊಂದು ಪ್ರಶ್ನೆ. ಭಾರತದಂಥ ಹಿಂದುಳಿದ ರಾಜ್ಯಗಳಲ್ಲಿ ಪ್ರತಿಯೊಂದು ದರ್ಜೆಯ ಕೆಲಸ ಮತ್ತು ಉದ್ಯೋಗಗಳಿಗೂ ನ್ಯಾಯ ವೇತನವನ್ನು ನಿಗದಿ ಮಾಡುವುದೇ ಆದರೆ ಅದು ಸ್ತುತ್ಯಕಾರ್ಯವೇ ನಿಜ, ಹಾಗೂ ಅದೊಂದು ಸ್ವಾಗತಾರ್ಹ ವಿಷಯ. ಏಕೆಂದರೆ ಅತಿ ಜನಸಂಖ್ಯೆಯಿಂದಾಗಿ ಶಮ್ರಜೀವಿಗಳ ಪೂರೈಕೆ, ಶ್ರಮಕ್ಕಾಗಿ ದೇಶದಲ್ಲಿ ಇರುವ ಬೇಡಿಕೆಗಿಂತಲು ಬಹಳ ಮಟ್ಟಿಗೆ ಅಧಿಕವಾಗೇ ಇದೆ. ಇಂಥ ಪರಿಸ್ಥಿತಿಯಲ್ಲಿ ಉದ್ಯೋಗದಾತರು ಕಡಮೆ ಮಟ್ಟದ ವೇತನವನ್ನು ಕೊಟ್ಟು ಅನ್ಯಾಯವಾದ ಅನುಕೂಲವನ್ನು ಪಡೆಯುತ್ತಿದ್ದಾರೆ. ಹೀಗೆ ಉದ್ಯೋಗದಾತರು ಶ್ರಮಜೀವಿಗಳನ್ನು ಅನ್ಯಾಯವಾಗಿ ದುಡಿಸಿಕೊಳ್ಳುವುದನ್ನು ತಪ್ಪಿಸಲು, ಉದ್ಯೋಗಿಗಳ ದೃಷ್ಟಿಯಿಂದಲೇ ಆದರೂ ನ್ಯಾಯ ವೇತನವನ್ನು ನಿಗದಿ ಮಾಡುವುದು

ಸ್ವಾಗತಾರ್ಹ. ನಮ್ಮ ದೇಶದ ಜನಸಂಖ್ಯೆಯ ಬಹು ಪಾಲು ಜನರು ಶ್ರಮ ಜೀವಿಗಳೇ ಆಗಿರುತ್ತಾರೆ. ಆದ್ದರಿಂದ ದೇಶದ ಬಹು ಪಾಲು ಜನ ಒಂದು ಮರ್ಯಾದೆ ಮಟ್ಟದಲ್ಲಿ ಜೀವನ ಮಾಡಲು ಅನುಕೂಲ ಕಲ್ಪಿಸಿಕೊಡುವಂತೆ ನಮ್ಮ ಧರ್ಮ, ಸಹೃದಯತೆ ಹಾಗೂ ಸಜ್ಜನ ಮನೋಭಾವ ಆಜ್ಞಾಪಿಸುತ್ತವೆ. ಆದರೆ ಈಗ ಎದುರಿಸುತ್ತಿರುವ ಕಾರ್ಯತಃ ಸಮಸ್ಯೆ ಏನೆಂದರೆ, ಸಾಮಾನ್ಯ ಆರ್ಥಿಕ ಸ್ಥಿತಿಗತಿಗಳು ಇನ್ನೂ ಮಾಪನಕ್ಕೆ ಸಿಕ್ಕುವ ರೂಪದಲ್ಲಿ ಇಲ್ಲದೇ ಇರುವುದರಿಂದ, ಸರ್ಕಾರ ಪ್ರತಿಯೊಂದು ಕೈಗಾರಿಕೆ ಹಾಗೂ ಇತರ ವ್ಯವಹಾರ ಉದ್ದಿಮೆಗಳಿಗೆ ಕನಿಷ್ಠ ವೇತನ ಮಟ್ಟವನ್ನು ನಿಗದಿ ಮಾಡುತ್ತಾ ಇರುವುದು.

ನ್ಯಾಯವೇತನ ನಿಗದಿ ಮಾಡಬೇಕಾದರೆ, ಯಾವುದೇ ಕೈಗಾರಿಕೆಯ ಪದಾರ್ಥದ ವೆಚ್ಚ ರಚನೆ (ಅಂದರೆ ಉತ್ಪಾದನಾ ವೆಚ್ಚ) ಹಾಗೂ ಸಾಮಾನ್ಯ ಪೇಟೆ ಸ್ಥಿತಿಗಳು ಅಂದರೆ ಅದರಲ್ಲೂ ಆ ಪದಾರ್ಥಕ್ಕೆ ಇರುವ ಬೇಡಿಕೆಯ ಸ್ಥಿತಿ ಸ್ಥಾಪಕತೆ, ಇವುಗಳ ದೀರ್ಘ ಅಭ್ಯಾಸ ಮತ್ತು ಪರಿಶೀಲನೆ ಅಗತ್ಯ. ಆಗ ಮಾತ್ರ ನಿಶ್ಚಿತ ಮಟ್ಟದಲ್ಲಿ ವೇತನ ಕೊಡಬಹುದಾದ ಉದ್ಯೋಗದಾತನ ಸಾಮರ್ಥ್ಯವನ್ನು ನಿಶ್ಚಯಿಸಬಹುದು. ಹಾಗೆ ಪರಾಮರ್ಶೆ, ಪರಿಶೀಲನೆ ಮತ್ತು ವಿಶ್ಲೇಷಣೆಗೆ

ದೊಡ್ಡ ಪ್ರಮಾಣದಲ್ಲಿ ಮೂಲ ಅಂಕಿ ಅಂಶಗಳು ದೊರೆಯುವಂತಿಲ್ಲದೇ ಇದ್ದಲ್ಲಿ ಮೊದಲು ಇಡೀ ರಾಷ್ಟ್ರಕ್ಕೆ ಅನ್ವಯಿಸುವಂತೆ ಕನಿಷ್ಠ ವೇತನ ಮಟ್ಟವನ್ನು ನಿಗದಿ ಮಾಡಿ ಅನಂತರ ನ್ಯಾಯ ವೇತನ ನಿಗದಿ ಮಾಡುವ ಕಾರ್ಯಕ್ರಮಕ್ಕೆ ಕೈಹಾಕಬಹುದು. ಏಕೆಂದರೆ, ಯಾವುದೇ ತೆರನಾದ ಇಚ್ಛಾನುಸಾರವಾಗಿ ವೇತನಗಳನ್ನು ನಿಗದಿ ಮಾಡಿದರೆ, ಅದು ಒಂದು ಕಡೆ, ಅತಿ ಕಡಿಮೆ ಮಟ್ಟದಲ್ಲಿದ್ದರೆ ಶ್ರಮಕ್ಕೆ ತಕ್ಕಂತೆ ಪ್ರತಿಫಲ ಇಲ್ಲದೇ ಕೆಲಸಗಾರನ ಮೇಲೆ ಕೆಟ್ಟ ಪರಿಣಾಮವನ್ನು ಉಂಟು ಮಾಡಬಹುದು. ಇಲ್ಲವೇ ಅತಿ ಹೆಚ್ಚು ಮಟ್ಟದಲ್ಲಿದ್ದರೆ, ಅದು

ಪೇಟೆ ಸ್ಥಿತಿಯ ಮೇಲೆ ಪರಿಣಾಮ ಬೀರಿ ಅಂಥ ವಸ್ತುಗಳಿಗೆ ಗ್ರಾಹಕನಿಂದ ಬೇಡಿಕೆ ಕಡಮೆ ಆಗಿ ಮಾರಾಟ ಆಗದೇ ಇರಬಹುದು.

ಸಾಮಾಜಿಕವಾಗಿ ಸ್ತುತ್ಯವಾಗಿಯೂ ನ್ಯಾಯವಾಗಿಯೂ ಇದ್ದರೂ ಸಹ, ಹೇಗೆ ತಾನೇ ಉದ್ಯೋಗದಾತ ವೇತನವನ್ನು ಹೆಚ್ಚಿಗೆ ಕೊಡಲು ಸಾಧ್ಯ ಆಗುತ್ತದೆ. ಏಕೆಂದರೆ, ಹಾಗೆ ಹೆಚ್ಚಿಗೆ ವೇತನ ಕೊಟ್ಟ ಪರಿಣಾಮವಾಗಿ, ವಸ್ತುಗಳ ಬೆಲೆಯಲ್ಲಿ ಏರಿಕೆ ಉಂಟಾಗಿ ಅವನ ವಸ್ತುಗಳ ಮಾರಾಟ ಕಡಮೆ ಆದರೆ



ಹೇಗೆ ತಾನೇ ವೇತನವನ್ನು ಹೆಚ್ಚಿಗೆ ಕೊಡಲು ಸಾಧ್ಯ. ಮಾರಾಟ ಪ್ರಮಾಣ ಕಡಮೆ ಆದರೆ, ಉತ್ಪಾದನೆಯ ಗಾತ್ರಕಡಮೆ ಆಗುತ್ತದೆ. ಉತ್ಪಾದನೆಯ ಗಾತ್ರ ಕಡಮೆ ಆಯಿತು ಎಂದರೆ, ಶ್ರಮದ ಅಗತ್ಯ ಅಷ್ಟರ ಮಟ್ಟಿಗೆ ಕಡಿಮೆ ಆಗುತ್ತದೆ. ಅಂದರೆ, ಕೆಲಸಗಾರರನ್ನು ಸ್ವಲ್ಪ ಮಟ್ಟಿಗೇ ಆದರೂ ಕೆಲಸದಿಂದ ವಜಾಮಾಡಲಾಗುತ್ತದೆ. ಇದರ ಪರಿಣಾಮವಾಗಿ ನಿರುದ್ಯೋಗದ ಮಟ್ಟ ಏರುತ್ತದೆ. ಇದು ಕಠಿಣವಾದದ್ದೇ ಆದರೂ ನಿಜಸ್ಥಿತಿಯೇ ಆಗಿರುತ್ತದೆ.

ಆದ್ದರಿಂದ ಕಾರ್ಮಿಕನ ಫಲೋತ್ಪಾದಕತೆ ಮತ್ತು ಜೀವನಾವಶ್ಯಕತೆಗಳನ್ನು ಪರಿಗಣಿಸಿ ಒಂದು ನ್ಯಾಯ ವೇತನ ಮಟ್ಟವನ್ನು ನಿರ್ಧರಿಸಲು ಪ್ರಾಮಾಣಿಕ ಯತ್ನಗಳ ಅಗತ್ಯ ಇದೆ. ಅದೇ ಕಾಲದಲ್ಲಿ ಅಂಥ ವೇತನ ಮಟ್ಟ ಎಷ್ಟರ ಮಟ್ಟಿಗೆ ನ್ಯಾಯವಾಗಿ ಇರಬೇಕು ಎಂದರೆ, ಪದಾರ್ಥಗಳಿಗೆ ಮಾರುಕಟ್ಟೆಯನ್ನೇ ಕಳೆದುಕೊಳ್ಳುವಂತಹ ಒಂದು ಪದಾರ್ಥ ವೆಚ್ಚ ರಚನೆ ಆಗಿರಬೇಕು. ಈ ರೀತಿಯಲ್ಲಿ ಒಂದು ಸುವರ್ಣ ಮಾಧ್ಯಮವನ್ನು ಕಂಡು ಹಿಡಿದಾಗ ಮಾತ್ರ ನ್ಯಾಯ ವೇತನದ ಆದರ್ಶವನ್ನು ಸಾಧಿಸಬಹುದು.

ಹೆಂಗಸರ ಶ್ರಮಕ್ಕಾಗಿ ವೇತನ : ಪ್ರಪಂಚದ ಅನೇಕ ಭಾಗಗಳಲ್ಲಿ, ಹೆಂಗಸರ ಶ್ರಮಕ್ಕೆ ಗಂಡಸರಿಗೆ ಕೊಡುವ ವೇತನಕ್ಕಿಂತಲೂ ಕಡಮೆ ಮಟ್ಟದಲ್ಲಿ ವೇತನವನ್ನು ಕೊಡಲಾಗುತ್ತಿದೆ. ಕೆಲವು ದೇಶಗಳಲ್ಲಿ ಇಂಥ ವ್ಯತ್ಯಾಸ

ಬಹಳವಾಗೇ ಇದೆ. ಇಂಥ ಪರಿಸ್ಥಿತಿ ಇರುವುದಕ್ಕೆ ಉದ್ಯೋಗದಾತರು ಎರಡು ಕಾರಣಗಳನ್ನು ಕೊಡುತ್ತಾರೆ. ಮೊದಲನೆಯದಾಗಿ ಹೆಂಗಸರ ಶ್ರಮದಲ್ಲಿ ಫಲೋತ್ಪಾದಕತೆ ಗಂಡಸರ ಶ್ರಮಕ್ಕಿಂತಲೂ ಕಡಿಮೆ ಆಗಿರುತ್ತದೆ ಎಂದು ಎರಡನೆಯದಾಗಿ ಹೆಂಗಸರು ಅಬಲೆಯರು, ಆದಕಾರಣ ಅವರು ಎಲ್ಲ ವಿಧದ ಕೆಲಸಗಳನ್ನು

ಮಾಡಲು ಶಕ್ತರಲ್ಲ. ಹೀಗಾಗಿ ಅವರನ್ನು ಕೆಲವು ಕೈಗಾರಿಕೆಗಳಿಂದ ಅನೇಕ ದೇಶಗಳಲ್ಲಿ ದೂರವೇ ಇಟ್ಟಿರುವುದು.

ಭಾರತ ದೇಶದಲ್ಲಿ, ಲಿಂಗದಲ್ಲಿ ವ್ಯತ್ಯಾಸವಿದ್ದರೂ ಸಂಭಾವನೆಯಲ್ಲಿ ಯಾವುದೇ ಅಸಮಾನತೆ ಇರಕೂಡದು ಎಂಬ ನಿಯಮ ದೇಶದ ಸಂವಿಧಾನದಲ್ಲೇ ಇದೆ. ಆದರೂ ಇನ್ನೂ ಕೆಲವು ಸಂಸ್ಥೆಗಳಲ್ಲಿ ಮತ್ತು ಕೈಗಾರಿಕೆಗಳಲ್ಲಿ ವೇತನ ಕೊಡುವುದರ ಬಗ್ಗೆ ಹೆಣ್ಣು ಕೆಲಸಗಾರರಿಗೆ ಪಕ್ಷಪಾತ ಮಾಡಲಾಗುತ್ತಲೇ ಇದೆ. ಅಂದರೆ, ಅವರಿಗೆ ಗಂಡಸರಿಗಿಂತಲೂ ಕಡಮೆ ವೇತನವನ್ನು



ಕೊಡಲಾಗುತ್ತಿದೆ. ಇದಕ್ಕೆ ಉದ್ಯೋಗದಾತರು ಕೊಡುವ ಕಾರಣ, ಅವರನ್ನು ಕಡಮೆ ದುಡಿತ ಬೇಕಾದಂಥ ಕೆಲಸಗಳನ್ನು ನಿರ್ವಹಿಸಲು ಮಾತ್ರ ನೇಮಕ ಮಾಡಿಕೊಳ್ಳಲಾಗಿದೆ. ಜತೆಗೆ ಅವರ ಫಲೋತ್ಪಾದಕತೆಯೂ ಕಡಮೆ. ಈ ಕಾರಣಗಳಿಂದಾಗಿ ಅವರಿಗೆ ಕಡಮೆ ಮಟ್ಟದಲ್ಲಿ ವೇತನ ಕೊಡಲಾಗುತ್ತಿದೆ. ಏನೇ ಆದರೂ ಸರ್ಕಾರಗಳು ಮಾತ್ರ ಈ ಬಗ್ಗೆ ಯಾವ ಪಕ್ಷಪಾತವನ್ನೂ ತೋರಿಸುತ್ತಿದ್ದಂತೆ ಕಂಡು ಬರುತ್ತಿಲ್ಲ, ಏಕೆಂದರೆ, ಸರ್ಕಾರದ ಸೇವೆಯಲ್ಲಿರುವ ಹೆಣ್ಣು ಮತ್ತು ಗಂಡಸು ನೌಕರರಿಗೆ ಸರಿಸಮನಾದ ವೇತನವನ್ನು ಕೊಡಲಾಗುತ್ತಿದೆ. ದೇಶದ ಕೆಲವಾರು ವ್ಯವಹಾರ ಉದ್ದಿಮೆಗಳೂ ಸಹ ತಮ್ಮ ಕಛೇರಿ ನೌಕರರಿಗೆ ಲಿಂಗ ಭೇದ ಇಲ್ಲದೇ ಒಂದೇ ಸಮನಾದ ವೇತನವನ್ನು ಕೊಡುತ್ತಿವೆ. ಆದರೆ ಸರ್ಕಾರದ ಅಥವಾ ಖಾಸಗಿ ಉತ್ಪಾದನಾ ಸಂಸ್ಥೆಗಳಲ್ಲಿ ಸ್ತ್ರೀ

ಕಾರ್ಮಿಕರು ಇಂದೂ ಈ ಬಗ್ಗೆ ಪಕ್ಷಪಾತಕ್ಕೆ ಒಳಗಾಗಿದ್ದಾರೆ ಎಂಬುದನ್ನು ನೆನಪಿನಲ್ಲಿಡಬೇಕು.

೪. ವೇತನ ಮತ್ತು ಕಾರ್ಮಿಕರ ಸಂಘಗಳು: ಉದ್ಯೋಗದಾತನ ಎದುರಿನಲ್ಲಿ ಪ್ರತಿಯೊಬ್ಬ ನೌಕರನೂ ಖಂಡಿತವಾಗಿಯೂ ಅಬಲನಾಗೇ ಇರುತ್ತಾನೆ. ಆದ್ದರಿಂದ ಎಲ್ಲ ಉತ್ಪಾದನಾ ಘಟಕಗಳ ಕೆಲಸಗಾರರೂ ಒಂದು ಗೂಡಿ ಕಾರ್ಮಿಕರ ಸಂಘಗಳನ್ನು, ಉದ್ಯೋಗದಾತನೊಡನೆ ಸಾಮೂಹಿಕವಾಗಿ ಚೌಕಾಶಿ ಮಾಡುವ ಉದ್ದೇಶದಿಂದ, ರೂಪಿಸಿಕೊಂಡಿರುತ್ತಾರೆ. ಅಂಥ ಕಾರ್ಮಿಕರ ಸಂಘಗಳನ್ನು ಕೆಳಕಂಡ ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ಸ್ಥಾಪಿಸಲಾಗಿರುತ್ತದೆ.

(೧) ವೇತನದ ದರಗಳನ್ನು ಹೆಚ್ಚಿಸುವುದು.

(೨) ಕನಿಷ್ಠ ಅಥವಾ ನಿರ್ದಿಷ್ಟ ವೇತನಗಳನ್ನು ನಿಗದಿ ಮಾಡುವುದು

(೩) ಉದ್ಯೋಗ ಅವಕಾಶಗಳನ್ನು ಹೆಚ್ಚಿಸುವುದು

(೪) ಉದ್ಯೋಗದ ಭದ್ರತೆಗಾಗಿ ಶ್ರಮಿಸುವುದು.

(೫) ವೇತನ ಸಮನಾತ್ವವನ್ನು ಸಂರಕ್ಷಣೆ ಮಾಡುವುದು.

(೬) ಕೆಲಸದ ಸ್ಥಿತಿಗತಿಗಳನ್ನು ಉತ್ತಮಗೊಳಿಸುವುದು.

(೭) ಸಮಾಜ ಭದ್ರತೆಯ ಕಾರ್ಯಕ್ರಮಗಳನ್ನು, ಅಂದರೆ, ನಿವೃತ್ತಿ ವೇತನ, ಭವಿಷ್ಯ ನಿಧಿ ನಿವೃತ್ತಿ ನಂತರದ ಇತರ ಕೊಡುಗೆಗಳು, ಆಚರಣೆಗೆ



ತರುವುದಕ್ಕೆ ಯತ್ನಗಳನ್ನು ನಡೆಸುವುದು.

"ಒಗ್ಗಟ್ಟೇಬಲ" ಎಂಬ ಹೇಳಿಕೆಯಂತೆ ಕಾರ್ಮಿಕರು ಸಂಘಗಳನ್ನು ಸ್ಥಾಪಿಸಿಕೊಂಡಿದ್ದಾರೆ. ಈಗ ಅವು ಬಹಳ ಬಲ ಶಾಲಿಯಾಗೇ ಇವೆ. ಸಾಮೂಹಿಕ ಚಾಕಾಶಿ ಮಾಡುವ ಬಲವನ್ನು ಹೊಂದಿರುವ ಈ ಕಾರ್ಮಿಕರ ಸಂಘಗಳು ಇಂದು ಉದ್ಯೋಗದಾತರಿಗೆ ಬಹಳ ಮಟ್ಟಿಗೆ ಆಜ್ಞೆಮಾಡುವ ಸ್ಥಿತಿಗೆ ಬಂದಿವೆ.

ಸಂಘಗಳು, ಮೇಲೆ ಹೇಳಿದ ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ಉದ್ಯೋಗದಾತರೊಡನೆ ಸಂಧಾನ ನಡೆಸುತ್ತವೆ. ಇದಕ್ಕಾಗಿ ಸಂಘಗಳ ಮುಂದಾಳುಗಳು ಉದ್ಯೋಗದಾತರೊಡನೆ, ದೀರ್ಘಕಾಲ ಸಂಧಾನ ನಡೆಸುತ್ತಾ ಕ್ರಮಗಳನ್ನು ಆರಂಭಿಸುತ್ತಾರೆ. ಕೈಗಾರಿಕಾ ಕೆಲಸಗಾರನು ನಡೆಸುವ ಅಂಥ ಕ್ರಮಗಳು, ಮುಷ್ಕರ, ನಿಯಮಕ್ಕನನುಸಾರವಾಗಿ ಕೆಲಸ ಮಾಡುವುದು. ಆಯುಧ ಕೆಳಗಿಟ್ಟು ಮುಷ್ಕರ ಒಳಗಿದ್ದೇ ಮುಷ್ಕರ ಇತ್ಯಾದಿ, ಕಛೇರಿ ಕೆಲಸಗಾರರು, ನಿಯಮಕ್ಕನುಸಾರವಾದ ಕೆಲಸ. ಲೇಖಣಿ ಕೆಳಗಿಟ್ಟ ಮುಷ್ಕರ ನಿಧಾನಗತಿಯಿಂದ ಕೆಲಸ ಮಾಡುವುದು ಹಾಗೂ ಪೂರ್ಣ ಮುಷ್ಕರ. ಇತ್ಯಾದಿ ವಿವಿಧ ರೂಪದಲ್ಲಿ ಮುಷ್ಕರ ನಡೆಸುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ, ಕಾರ್ಖಾನೆಯ ಅಥವಾ ಕಛೇರಿಯ ಆಸ್ತಿಪಾಸ್ತಿಗಳಿಗೆ ಹಾನಿ ಆಗುವ ಸಂದರ್ಭಗಳಲ್ಲಿ ಉದ್ಯೋಗದಾತರು ಉತ್ಪಾದನಾ ಆಸ್ತಿಪಾಸ್ತಿಗಳಿಗೆ ಬೀಗ ಮುದ್ರೆಯನ್ನು ಹಾಕುತ್ತಾರೆ.
ಮುಷ್ಕರ: ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯ ಉದ್ಯೋಗದಾತನ ಮೇಲೆ ತರಲು ಮುಷ್ಕರ ಹೂಡುತ್ತಾರೆ. ಸಾಮಾನ್ಯ ಮುಷ್ಕರಗಳು ಸರ್ವೆ ಸಾಧಾರಣ ಆದ ಚಳುವಳಿ ಕ್ರಮದಲ್ಲಿ ಒಂದು ಆಗಿದೆ. ಶ್ರಮಜೀವಿಗಳ ಬೇಡಿಕೆಗಳು ಸಫಲವಾಗಿ ಈಡೇರುವವರೆಗೂ ಎಲ್ಲ ಕೆಲಸಗಾರರು ಒಟ್ಟಿಗೆ ಕೆಲಸಕ್ಕೆ ಹೋಗದೇ ಇರುವುದು. ಯಾವುದೇ ಸಂಧಾನದ ಮಾತು ಕತೆಗಳು ಮುರಿದು ಬಿದ್ದರೆ, ಇಲ್ಲವೇ ಉದ್ಯೋಗಿಗಳಿಗೂ ಮತ್ತು ಉದ್ಯೋಗದಾತರ ನಡುವೆ ಒಂದೇ ಅಭಿಪ್ರಾಯ ಇರದಿದ್ದರೆ, ಇಲ್ಲವೇ ಒಂದೇ ಅಭಿಪ್ರಾಯಕ್ಕೆ ಬರುವುದಕ್ಕೆ ಆಗದೇ ಇದ್ದ ಸಂದರ್ಭಗಳಲ್ಲಿ, ಕಟ್ಟಕಡೆಯ ಅಸ್ತ್ರವಾಗಿ ಉದ್ಯೋಗಿಗಳು ಮುಷ್ಕರ ಆರಂಭಿಸುತ್ತಾರೆ. ಅಂಥ ಮುಷ್ಕರವನ್ನು "ಕೈಗಾರಿಕಾ ಮುಷ್ಕರ" ಎನ್ನಲಾಗುತ್ತದೆ. ಏಕೆಂದರೆ ಸಾಮಾನ್ಯವಾಗಿ



ಮುಷ್ಕರ ಒಂದು ಕೈಗಾರಿಕೆಗೆ ಸಂಬಂಧ ಪಟ್ಟಿರುತ್ತದೆ.

ಮುಷ್ಕರದ ಪರಿಣಾಮವಾಗಿ ಉತ್ಪಾದನೆಯಲ್ಲಿ ನಷ್ಟ ಉಂಟಾಗುತ್ತದೆ. ಉತ್ಪಾದನೆ ಕಡಮೆ ಆದರೆ ಅಷ್ಟರ ಮಟ್ಟಿಗೆ ರಾಷ್ಟ್ರೀಯ ಆದಾಯದ ಪ್ರಮಾಣದಲ್ಲಿ ಕಡಮೆ ಆಗುತ್ತದೆ. ರಾಷ್ಟ್ರೀಯ ಆದಾಯ ಕಡಮೆ ಆದರೆ ಅಷ್ಟರಮಟ್ಟಿಗೆ ಆರ್ಥಿಕ ಚಟುವಟಿಕೆಗಳೂ ಕುಗ್ಗುತ್ತವೆ. ಏಕೆಂದರೆ ಬಂಡವಾಳ ಹೂಡಿಕೆಗಾಗಿ ಉಳಿತಾಯವೇ ಮುಂಬರುತ್ತಿರುವುದಿಲ್ಲ.

ಮುಷ್ಕರವನ್ನು ಕಛೇರಿ ಉದ್ಯೋಗಗಳೂ ನಡೆಸುತ್ತಾರೆ. ಅಂಥ ಮಷ್ಕರಗಳು, ಸರ್ಕಾರಿ ನೌಕರರ ಮುಷ್ಕರ, ಬ್ಯಾಂಕು ಉದ್ಯೋಗಿಗಳ ಮುಷ್ಕರ ಇಲ್ಲವೇ ವಿಮಾ ಸಂಸ್ಥೆಯ ಉದ್ಯೋಗಿಗಳ ಮುಷ್ಕರ ಇತ್ಯಾದಿ ರೂಪಗಳನ್ನು ಪಡೆದಿರುತ್ತವೆ.

ನಿಯಮಕ್ಕೆ ಅನುಸಾರವಾದ ಕೆಲಸ : ಅಂದರೆ, ಎಷ್ಟು ಉತ್ಪಾದನೆ ಮಾಡಲು ಸಮರ್ಥರಾಗಿದ್ದಾರೋ ಅಷ್ಟು ಕೆಲಸವನ್ನು ಮಾಡದೇ ಇರುವುದೆ ನಿಯಮಕ್ಕೆ ಅನುಸಾರವಾದ ಕೆಲಸದ ಮುಷ್ಕರ. ಕೆಲವು ಕಾರ್ಮಿಕ ಸಂಘದ ಮುಂದಾಳುಗಳು ಹೀಗೆ ಉತ್ಪನ್ನವನ್ನು ಮಿತಗೊಳಿಸುವುದು ಉದ್ಯೋಗಿಗಳ ಅನುಕೂಲಕ್ಕೆ ಎಂದೇ ತಿಳಿದಿರುತ್ತಾರೆ. ಆದರೆ ಪರಿಸ್ಥಿತಿ ಬೇರೆಯೇ ಇದೆ. ಇಂಥ ರೂಪದ ಮುಷ್ಕರದಿಂದಾಗಿ, ಉತ್ಪಾದನಾ ಪ್ರಮಾಣ ಕುಗ್ಗುತ್ತದೆ. ಕೆಲಸಗಾರರು ಕಡಮೆ ಫಲಭರಿತವಾಗಿರುವುದರಿಂದ ವಸ್ತುಗಳ ಉತ್ಪಾದನಾ ವೆಚ್ಚ ಹೆಚ್ಚುತ್ತದೆ. ತತ್‌ಪರಿಣಾಮವಾಗಿ ವಸ್ತುಗಳಿಗೆ ಬೇಡಿಕೆ ಕುಗ್ಗುತ್ತದೆ. ವಸ್ತುಗಳಿಗೆ ಬೇಡಿಕೆ ಕಡಮೆ ಒಂದು ಸಲ ಆಯಿತು ಎಂದರೆ, ಶ್ರಮಕ್ಕೆ ಬೇಡಿಕೆ ಕಡಮೆ ಆಗುತ್ತದೆ. ಮತ್ತು ಅಪೂರ್ಣವಾದ ನಿರುದ್ಯೋಗ ಆರಂಭ ಆಗುತ್ತದೆ.

ಆಯುಧ ಕೆಳಗಿಟ್ಟ ಮುಷ್ಕರ : ಈ ರೀತಿಯ ಮುಷ್ಕರವನ್ನೂ ಮೇಲೆ ಹೇಳಿದ ಮುಷ್ಕರದಂತೆ ಉತ್ಪಾದನಾ ಘಟಕಗಳ ಒಳಗಿನ ಆವರಣದಲ್ಲೇ ನಡೆಸುತ್ತಾರೆ. ಕೆಲಸಕ್ಕೆ ನಾಮಕಾವಸ್ತೆ ಹಾಜರಾಗಿ, ಏನೂ ಕೆಲಸ ಮಾಡದೇ ಸುಮ್ಮನೆ ಕುಳಿತಿರುತ್ತಾರೆ. ಇದು ಆಯುಧ ಕೆಳಗಿಟ್ಟ ಮುಷ್ಕರ. ಕೆಲವು ಕಡೆ

ಯಂತ್ರಗಳನ್ನು ನಡೆಸಲು ಆರಂಭಿಸುತ್ತಾರೆ. ಆದರೆ ಅದರ ಮೇಲೆ ಮಾಡಬೇಕಾದ ಕೆಲಸವನ್ನು ಮಾಡುವುದಿಲ್ಲ, ಅಷ್ಟೆ. ಇದನ್ನೇ ಕಛೇರಿಗಳಲ್ಲಿ ಲೇಖಣಿ ಕೆಳಗಿಟ್ಟ ಮುಷ್ಕರ ಎನ್ನುತ್ತಾರೆ. ಕಛೇರಿಯಲ್ಲಿ ಕೆಲಸವನ್ನು ಬಹಿಷ್ಕರಿಸುವ ಕ್ರಮಕ್ಕೆ



ಇದು ಇನ್ನೊಂದು ಹೆಸರು.

ಬೀಗ ಮುದ್ರೆ : ಇದು ಉದ್ಯೋಗದಾತರು ತಮ್ಮ ನೌಕರರ ವಿರುದ್ಧ ನಡೆಸುವ ಕ್ರಮ. ಸಂಧಾನ ವಿಫಲವಾದಾಗ ಕಾರ್ಮಿಕರ ಸಂಘಗಳು ಮುಷ್ಕರವನ್ನು ಘೋಷಿಸುತ್ತವೆ. ಕಾರ್ಮಿಕರು ಕಾನೂನುಬಾಹಿರ ಮುಷ್ಕರವನ್ನು ಘೋಷಿಸಿದಾಗ ಅಥವಾ ಮುಷ್ಕರ ಹೂಡಿದ ತಮ್ಮ ಉದ್ಯೋಗಿಗಳಿಂದ ಕಾರ್ಖಾನೆಯ ಅಥವಾ ಕಛೇರಿಯ ಆಸ್ತಿ ಪಾಸ್ತಿಗಳಿಗೆ ಹಾನಿ ಆಗುವ ಸಂದರ್ಭಗಳು ಇದ್ದಾಗ, ಉದ್ಯೋಗದಾತರು ಉತ್ಪಾದನ ಘಟಕಗಳಿಗೆ ಬೀಗಮುದ್ರೆಯನ್ನು ಹಾಕುತ್ತಾರೆ. ಅಂದರೆ ಉದ್ಯೋಗಿಗಳಿಗೆ ಇಂಥ ಘಟಕಗಳ ಒಳಗೆ ಬರದಂತೆ ಒಂದು ರೀತಿಯಲ್ಲಿ ಬಹಿಷ್ಕಾರ ಹಾಕುತ್ತಾರೆ. ಬೀಗಮುದ್ರೆ ಅಂದರೆ, ಉತ್ಪಾದನಾ ಘಟಕವನ್ನು ಮುಚ್ಚಲಾಗುತ್ತದೆ. ಎಂದರ್ಥ. ಇಂಥ ಬೀಗ ಮುದ್ರೆಗೆ ಏನೇ ಕಾರಣ ಇರಲಿ, ಇದರ ಪರಿಣಾಮವಾಗಿ ಉತ್ಪಾದನೆ ಪೂರ್ಣವಾಗಿ ನಿಂತುಹೋಗುತ್ತದೆ. ಹೀಗೆ ಉತ್ಪಾದನೆ ನಿಂತು ಹೋದರೆ ರಾಷ್ಟ್ರೀಯ ಆದಾಯಕ್ಕೆ ನಷ್ಟ ಆಗುತ್ತದೆ ಎಂದು ಹೇಳುವುದು ಅನಗತ್ಯ.

ಈ. ಬಡ್ಡಿ : ಬಂಡವಾಳದ ಬಳಕೆಗೆ ಕೊಡುವ ಪ್ರತಿಫಲ ಅಥವಾ ಸಂಭಾವನೆಯೇ ಬಡ್ಡಿ, ವ್ಯವಹಾರಸ್ತರು ವಿರಳವಾದ ಎರವಲು ಕೊಡುವ ಹಣವನ್ನು ಪಡೆದು ಅದರ ಬಳಕೆಗಾಗಿ ಕೊಡುವ ಬೆಲೆಯೇ ಬಡ್ಡಿ ಎಂದೂ ಹೇಳಬಹುದು. ಬಡ್ಡಿಯನ್ನು ಒಂದು ಒಪ್ಪಂದದ ಮೇರೆಗೆ ಕೊಟ್ಟಾಗ ಅದು "ಒಪ್ಪಂದದ ಬಡ್ಡಿ" ಆಗುತ್ತದೆ. ಯಾರಾದರೂ ತಮ್ಮ ಬಂಡವಾಳವನ್ನು ತಮ್ಮ ಸ್ವಂತ ವ್ಯವಹಾರದಲ್ಲೇ ಹೂಡಿದ್ದರೆ, (ಉದಾಹರಣೆಗೆ, ಏಕವ್ಯಾಪಾರಿ) ಹಾಗೆ

ವ್ಯವಹಾರದಿಂದ ಬರುವ ಆದಾಯದ ಒಂದು ಭಾಗ ಬಂಡವಾಳ ಬಳಕೆಯಿಂದ ಬಂದದ್ದೇ ಆಗಿರುತ್ತದೆ. ಹಾಗೆ ಬಂಡವಾಳದ ಬಳಕೆಗೆ ಎಂದು ಗಣಿಸಲಾದ ಆದಾಯದ ಭಾಗವನ್ನು "ಬಡ್ಡಿ ಎಂದು ಗುರುತಿಸಬಹುದಾದ ಬಡ್ಡಿ" ಎನ್ನಲಾಗುತ್ತದೆ. ಅಂದರೆ ಅವನಿಗೆ ಬಂದ ಒಟ್ಟು ಆದಾಯದ ಒಂದು ಭಾಗ ಅವನ ಬಂಡವಾಳದ ಬಳಕೆಯಿಂದಲೇ ಬಂದಿರುತ್ತದೆ. "ಶುದ್ಧ ಬಡ್ಡಿ" ಏನಿದ್ದರೂ ಬಂಡವಾಳದ ಬಳಕೆಗೆ ಕೊಡುವ ಒಂದು ಬಡ್ಡಿದರ, ಅಷ್ಟೆ.

ಹಿಂದಿನ ಕಾಲದಿಂದಲೂ ಅಂದರೆ, ಗ್ರೀಕರ ಕಾಲದಿಂದಲೂ ಬಡ್ಡಿಯನ್ನು ಕೊಡುವುದನ್ನು ನಿಷೇದಿಸಲಾಗಿತ್ತು. ಬಹುಶಃ ಆಗಿನ ಕಾಲದಲ್ಲಿ ಉಳಿತಾಯ



ಮತ್ತು ಬಂಡವಾಳ ಸಂಚಯಕ್ಕೆ ಇದ್ದ ಸಂಬಂಧ ಜನರಿಗೆ ತಿಳಿದಿರಲಿಲ್ಲ. ಗ್ರಾಹಕರ ವಸ್ತುಗಳನ್ನು ಕೊಳ್ಳಲೆಂದೇ ಹಣವನ್ನು ಸಾಲವಾಗಿ ಪಡೆಯುವ ಹವ್ಯಾಸ ಬೆಳೆದಿತ್ತು. ಜತೆಗೆ ಈಗಿನ ದಿನಗಳಲ್ಲಿ ಸಾಧ್ಯ ಆಗುವ ಇನ್ನಷ್ಟು ವಸ್ತುಗಳ ಉತ್ಪಾದನೆಗಾಗಿ ಬಂಡವಾಳ ಹೂಡಿಕೆಯ ಅವಕಾಶಗಳು ಹೆಚ್ಚು ಇರುತ್ತಿರಲಿಲ್ಲ.

ಏನೇ ಆದರೂ ಕಾಲಾನಂತರ ಉತ್ಪಾದನೆಯನ್ನು ಹೆಚ್ಚಿಸಲು ಉತ್ಪಾದಕ ವಸ್ತುಗಳ ಮೇಲೆ ಬಂಡವಾಳ ಹೂಡುವ ಕಲ್ಪನೆ ರೂಪಗೊಳ್ಳಲು ಆರಂಭ ವಾಯಿತು. ಜತೆಗೆ ಉತ್ಪಾದನಾ ಘಟಕಗಳು ಕಾಲಕ್ರಮೇಣ ವಿಸ್ತರಗೊಂಡವು. ಇದರ ಪರಿಣಾಮ ಉತ್ಪಾದನೆ ಬೃಹತ್ ಮಟ್ಟಕ್ಕೆ ಏರಿತು. ಇಂಥ ಉತ್ಪಾದನಾ ಕಾರ್ಯಗಳಿಗೆ ಅಗಾಧವಾದ ಪ್ರಮಾಣದಲ್ಲಿ ಬಂಡವಾಳ ಬೇಕಾಯಿತು. ಬಂಡವಾಳ ಹೂಡಿಕೆಯ ಅವಕಾಶಗಳು ಹೆಚ್ಚಾದಂತೆ ಬಂಡವಾಳವನ್ನು ಸಾಲವಾಗಿ ಪಡೆಯುವ ಅಗತ್ಯ ಜನರಲ್ಲಿ ಅರಿವಾಗತೊಡಗಿತು. ಸಾಲ ಪಡೆಯುವವನು ಬಂಡವಾಳವನ್ನು ಉತ್ಪಾದನಾ ಕಾರ್ಯಗಳಲ್ಲಿ ಹಾಕುತ್ತಿದ್ದನು. ಆದ್ದರಿಂದ ಅವನು ಹಾಗೆ ಪಡೆದಬಂಡವಾಳಕ್ಕೆ ಬಡ್ಡಿಯನ್ನು ಕೊಡಲು ಶಕ್ತನಾಗಿರುತ್ತಿದ್ದ.

ಹೀಗೆ ಬಂಡವಾಳವನ್ನು ಸಾಲವಾಗಿ, ಒಂದು ಪ್ರತಿಫಲಕ್ಕಾಗಿ ಕೊಡುವ ಅಭ್ಯಾಸ ಬೆಳೆದು ಬಂದಿತು. ಜತೆಗೆ ಬಂಡವಾಳ ಹೂಡಿಕೆಯ ಕಾರ್ಯಕ್ರಮಗಳಲ್ಲಿ ಸಾಮಾನ್ಯವಾಗಿ ಇರುವ ಅಪಾಯಗಳಿಂದ ರಕ್ಷಿಸಿಕೊಳ್ಳಲೂ ಸಹ ಬಂಡವಾಳ ಬಳಕೆಗಾಗಿ ಬಡ್ಡಿಯನ್ನು ಹಾಕಲು ಆರಂಭ ಆಯಿತು.

ಬಂಡವಾಳದ ಮೇಲೆ ಬಡ್ಡಿಯನ್ನು ಕೊಡುವ ಅಥವಾ ಪಡೆಯುವ ಅಗತ್ಯ ಉಂಟಾಗುವುದು ಕಾಲ ಮತ್ತು ಅಪಾಯದ ಅಂಶಗಳಿಂದ.

ಕಾಲದ ಅಂಶ : ಬಂಡವಾಳದ ಒಡೆಯ ಬಂಡವಾಳವನ್ನು ಕೊಟ್ಟಾಗ, ಅದನ್ನು ವಸ್ತು ಮತ್ತು ಸೇವೆಗಳ ಪ್ರಸ್ತುತ ಅನುಭೋಗಕ್ಕಾಗಿ ವ್ಯಯ ಮಾಡಿ ಪಡೆಯಬಹುದಾದ ತೃಪ್ತಿಯನ್ನು ತನ್ನ ಸ್ವಇಚ್ಛೆಯಿಂದಲೇ ಕಳೆದುಕೊಂಡಿರುತ್ತಾನೆ. ಅಥವಾ ತನಗಾಗಿ ವ್ಯಯ ಮಾಡುವುದನ್ನು ಮುಂದೂಡಿರುತ್ತಾನೆ. ಆದ್ದರಿಂದ ಅವನಿಗೆ ಇದಕ್ಕಾಗಿ ಬಡ್ಡಿ ರೂಪದಲ್ಲಿ ಪರಿಹಾರ ಕೊಡಬೇಕಾದದ್ದು ನ್ಯಾಯವೇಸರಿ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಬಂಡವಾಳವನ್ನು ಸಾಲವಾಗಿ



ಕೊಟ್ಟು ಪುನಃ ಪಡೆಯುವುದರಲ್ಲಿ ಕಾಲದ ಅಂತರ ಅಡಗಿದೆ. ಅಂಥ ಕಾಲದ ಅಂತರಕ್ಕಾಗಿ ಬಂಡವಾಳದ ಒಡೆಯನಿಗೆ ಸಂಭಾವನೆಯನ್ನು ಕೊಡಬೇಕು.

ಅಪಾಯದ ಅಂಶ : ಮುಂದೆ ಲಾಭ ಸಂಪಾದನೆ ಮಾಡಬಹುದು ಎಂಬ ನಿರೀಕ್ಷೆಯ ಆಧಾರದ ಮೇಲೆ ಎಲ್ಲ ವಾಣಿಜ್ಯ ಮತ್ತು ವ್ಯವಹಾರ ಚಟುವಟಿಕೆಗಳು ನಡೆಯುವುದು. ಭವಿಷ್ಯತ್ ಪೇಟೆ ಸ್ಥಿತಿಗತಿಗಳನ್ನು ಸರಿಯಾಗೇ ಲೆಕ್ಕ ಹಾಕಿದ್ದೇವೆ ಎಂಬ ಕಲ್ಪನೆಯ ಆಧಾರದ ಮೇಲೆ ಸಾಲವಾಗಿ ಪಡೆದು ಬಂಡವಾಳವನ್ನು ಹೂಡವುದು. ಎಲ್ಲ ರೀತಿಯಲ್ಲೂ ಮುಂಜಾಗ್ರತೆ ಮತ್ತು ಮುನ್ನೆಚ್ಚರಿಕೆಯನ್ನೂ ತೆಗೆದು ಕೊಂಡಿದ್ದರೂ ಸಹ, ಭವಿಷ್ಯತ್‌ಕಾಲದಲ್ಲಿ ಏನು ಆಗುತ್ತದೆ ಎಂದು ಹೇಳುವುದು ಯಾವಾಗಲೂ ಕಷ್ಟವೇ. ಏಕೆಂದರೆ ಇಂದಿನ ನಮ್ಮ ಸರಿಯಾದ ಲೆಕ್ಕಾಚಾರ ಏನಿದ್ದರೂ, ಈವತ್ತು ಅಸ್ಥಿತ್ವದಲ್ಲಿ

ಇರುವ ಕೆಲವು ವಾಸ್ತವಾಂಶಗಳು ಹಾಗೂ ಮುಂದೆ ಇರಬಹುದಾದ ನಿರೀಕ್ಷಿತ ಸಂಗತಿಗಳು ಆಧಾರದ ಮೇಲೆ ನಿಂತಿದೆ. ಅಂದರೆ ಯಾವುದೇ ವ್ಯವಾಹರದಲ್ಲೂ ಅನಿಶ್ಚಿಯತೆ ಇದ್ದೇ ಇದೆ. ಆದ್ದರಿಂದ ಸಾಲ ಕೊಟ್ಟವನು ಮುಂದೆ ಇರಬಹುದಾದ ನಷ್ಟಾಪಾಯಕ್ಕೆ ಪರಿಹಾರ ರೂಪದ ಸಂಭಾವನೆಯನ್ನು ನಿರೀಕ್ಷಿಸುವುದು ನ್ಯಾಯವಾಗೇ ಇದೆ.

ಬಡ್ಡಿಯದರದ ನಿರ್ಣಾಯಕಗಳು : ವಾಡಿಕೆಯಲ್ಲಿರುವಂತೆ ಬಡ್ಡಿದರವನ್ನು ನಿರ್ಣಯಿಸುವ ಅಂಶಗಳು.

(ಅ) ದೊರಕುವ ಹಣದ ಪ್ರಮಾಣ.

(ಆ) ಅಂಥ ಹಣಕ್ಕೆ ಇರುವ ಬೇಡಿಕೆ.

(ಇ) ಸಾಲದ ಕಾಲಾವಧಿ, ಮತ್ತು

(ಈ) ಯಾವ ವ್ಯವಹಾರಕ್ಕೆ ಸಾಲಪಡೆಯಲಾಯಿತೋ ಅಂಥ ವ್ಯವಹಾರದಲ್ಲಿ ಇರುವ ನಷ್ಟಾಪಾಯಗಳು.

ಸಾಮಾನ್ಯವಾಗಿ, ಸಾಲದ ಹಣದ ಪೂರೈಕೆ ಮತ್ತು ಇರುವ ಬೇಡಿಕೆಗಳೇ ಬಡ್ಡಿಯದರವನ್ನು ನಿರ್ಣಯಿಸುತ್ತವೆ. ಬಂಡವಾಳ ಪೇಟೆ ಅಥವಾ ಹಣದ ಪೇಟೆಯಲ್ಲಿ ಸಾಲ ಕೊಡುವ ಹಣಕ್ಕಾಗಿ ಸಾಲ ಪಡೆಯುವವರಿಂದ ಸಾಕಷ್ಟು ಪೈಪೋಟಿ ಇರುತ್ತದೆ. ಪದಾರ್ಥಗಳಂತೆ ಬಂಡವಾಳವೂ ಸಹ ಯಾರು ಹೆಚ್ಚು ಬಡ್ಡಿ ದರವನ್ನು ಕೊಡುತ್ತಾರೋ ಅವರ ಬಳಿಗೆ ಇಲ್ಲವೇ ಅವರ ಸ್ಥಳಕ್ಕೆ ಓಡುತ್ತದೆ.



ಹಣದ ಪೇಟೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೂರೈಕೆ ಮತ್ತು ಬೇಡಿಕೆಗಳೇ ಯಾವಾಗಲೂ ಬಡ್ಡಿದರವನ್ನು ನಿರ್ಣಯಿಸುತ್ತವೆ. ಆದರೆ ಇಂದಿನ ಸನ್ನಿವೇಶದಲ್ಲಿ ಸಾಮಾನ್ಯವಾಗಿ ಪ್ರತಿಯೊಂದು ದೇಶದಲ್ಲೂ ಆಯಾ ದೇಶದ ಸರ್ಕಾರದ ಹಣಕಾಸಿನ ನೀತಿ ಬಡ್ಡಿದರ ನಿರ್ಣಯಕ್ಕೆ ಸಾಕಷ್ಟು

ಮುಖ್ಯವಾದ ಅಂಶವೇ ಆಗಿರುತ್ತದೆ.

ಬಂಡವಾಳ ಪೂರೈಕೆ : ಬಂಡವಾಳ ಪೂರೈಕೆ ಒಂದು ಗೊತ್ತಾದ ಕಾಲ ಮತ್ತು ಸ್ಥಳದಲ್ಲಿ ಈ ಕೆಳಕಂಡ ಅಂಶಗಳಿಂದ ಸಾಮಾನ್ಯವಾಗಿ ನಿರ್ಣಯ ಆಗುತ್ತದೆ.

(೧) ಆದಾಯಮಟ್ಟ : ದೇಶದ ಜನರ ಆದಾಯದ ಮಟ್ಟ ಹೆಚ್ಚಾಗುವ ಪ್ರವೃತ್ತಿ ಇದ್ದರೆ, ಅಂಥ ಪರಿಸ್ಥಿತಿಯಲ್ಲಿ ಉಳಿತಾಯವೂ ಸಹ ಹೆಚ್ಚಾಗುತ್ತದೆ. ಉಳಿತಾಯವನ್ನು ಯಾರು ಮನೆಯಲ್ಲಿ ಇಡದೇ ಬ್ಯಾಂಕುಗಳಲ್ಲಿ ಠೇವಣಿ ಇಡುತ್ತಾರೆ ಇಲ್ಲವೇ ನೇರವಾಗಿ ಹಣದ ಪೇಟೆಯಲ್ಲಿ ಬಂಡವಾಳ ಹೂಡಿಕೆಗಾಗಿ ಸಾಲ ಕೊಡಲಾಗುತ್ತದೆ. ಹೀಗೆ ಬಂಡವಾಳದ ಪೂರೈಕೆ ಹೆಚ್ಚುತ್ತಾ ಹೋಗುತ್ತಿರುತ್ತದೆ.

(೨) ಕಾಲದ ಇಚ್ಛೆಗಳು : ಹಣದ ಅತಿಪ್ರಸಾರಣ ಇರುವ ಕಾಲದಲ್ಲಿ ವಸ್ತುಗಳನ್ನು ಈಗ ಕೊಳ್ಳುವುದೇ ಮೇಲು, ಏಕೆಂದರೆ ನಾಳೆ ಬೆಲೆ ಇನ್ನಷ್ಟು ಹೆಚ್ಚಬಹುದು ಎಂಬ ಭಯ ಜನರಿಗೆ ಇದ್ದೇ ಇರುತ್ತದೆ. ಅಂದರೆ ಉಳಿತಾಯ ಮಾಡಲು ಜನ ಹೆಚ್ಚಾಗಿ ಬಯಸುವುದಿಲ್ಲ. ಆದ್ದರಿಂದ ಅತಿಪ್ರಸಾರಣ ಏನಿದ್ದರೂ ಜನರಿಗೆ ಉಳಿತಾಯ ಮಾಡದಂತೆ ಜನರಿಗೆ ಪ್ರಚೋದಿಸುತ್ತವೆ.

(೩) ರಾಷ್ಟ್ರೀಯ ಮಿತವ್ಯಯ ಹವ್ಯಾಸ : ಪ್ರತಿಯೊಂದು ದೇಶದಲ್ಲೂ ಬಹುಪಾಲು ಆರ್ಥಿಕ ಚಟುವಟಿಕೆಗಳ ನಿಯಂತ್ರಣ ಮತ್ತು ಹತೋಟಿಯನ್ನು ದೇಶದ ಸರ್ಕಾರವೇ ಮಾಡುತ್ತದೆ. ಸರ್ಕಾರಗಳು ಮಿತವ್ಯಯದ ಕಾರ್ಯನೀತಿಯನ್ನು ರಚಿಸಿದರೆ ಸ್ವಾಭಾವಿಕವಾಗಿ ಉಳಿತಾಯ ಹೆಚ್ಚಾಗುತ್ತದೆ.

(೪) ಬ್ಯಾಂಕುಗಳ ಕಾರ್ಯನೀತಿ : ಮುಂದಿನ ಭಾಗದಲ್ಲಿ ನೀವು ತಿಳಿಯುವಂತೆ, ಬ್ಯಾಂಕುಗಳು ಸಾಲವಾಗಿ ದೊರಕುವ ಹಣದ ಪೂರೈಕೆಯನ್ನು ಹೆಚ್ಚಿಸಲೂ ಬಲ್ಲವು. ಹಾಗೇ ಕಡಮೆಯನ್ನೂ ಮಾಡಬಲ್ಲವು, ಇದಕ್ಕೆ ಸಂಬಂಧ ಪಟ್ಟ ಕಾರ್ಯ ನೀತಿಯನ್ನು ದೇಶದ ಕೇಂದ್ರ ಬ್ಯಾಂಕು (ಭಾರತ ದೇಶದಲ್ಲಿ ರಿಸರ್ವ್‌ಬ್ಯಾಂಕ್) ಮಾಡುತ್ತದೆ. ಬ್ಯಾಂಕುಗಳು ಸಾಲವನ್ನು ಅಗ್ಗ ಮಾಡಿದಾಗ

ಸಾಲ ಕೊಡುವ ಹಣದ ಪ್ರಮಾಣ ಹೆಚ್ಚಾಗಿ ದೊರಕುತ್ತದೆ. ಆದರೆ ಬ್ಯಾಂಕುಗಳು ತುಟ್ಟಿಹಣದ ಕಾರ್ಯನೀತಿಯನ್ನು ಅನುಸರಿಸಿದಾಗ, ಬಂಡವಾಳ ಹೂಡಿಕೆಗೆ ಸಾಲವಾಗಿ ದೊರಕುವ ಹಣದ ಪ್ರಮಾಣ ಕಡಮೆಯೇ ಇರುತ್ತದೆ.

ಬಂಡವಾಳಕ್ಕೆ ಬೇಡಿಕೆ : ಬಂಡವಾಳಕ್ಕೆ ಬೇಡಿಕೆ ಕೆಳಕಂಡ ಅಂಶಗಳಿಂದ ನಿರ್ಣಯ ಆಗುತ್ತದೆ.

(೧) ವ್ಯವಹಾರದ ನಿರೀಕ್ಷೆಗಳು : ಈಗ ಹಾಲಿ ವ್ಯವಹಾರಸ್ತರಲ್ಲಿ ಇರುವ ವ್ಯವಹಾರ ನಿರೀಕ್ಷೆಗಳು ಆಶಾವಾದಿ ಮನೋಭಾವದಿಂದ ಕೂಡಿವೆಯೇ ಇಲ್ಲ ನಿರಾಶವಾದಿ ಮನೋಭಾವದಿಂದ ಕೂಡಿವೆಯೇ ಎಂಬ ಅಂಶ ಅತ್ಯಗತ್ಯ. ಏಕೆಂದರೆ ವ್ಯವಹಾರಸ್ತರು ಆಶಾವಾದಿ ಮನೋಭಾವದಿಂದ ಇದ್ದರೆ ಆಗ ಬಂಡವಾಳಕ್ಕೆ ಹೆಚ್ಚು ಬೇಡಿಕೆ ಇರುತ್ತದೆ. ವ್ಯತಿರಿಕ್ತವಾಗಿ ನಿರಾಶಾವಾದಿತ್ವವೇ ತಾಂಡವಾಡುತ್ತಿದ್ದರೆ, ಬಂಡವಾಳಕ್ಕೆ ಬೇಡಿಕೆ ಕಡಮೆಯೇ ಇರುತ್ತದೆ.

(೨) ಬಂಡವಾಳದ ಸವೆತ : ಯಾವುದೇ ಕೈಗಾರಿಕೆಯಲ್ಲಿ ಬಂಡವಾಳ ವಸ್ತುಗಳ ಸವೆತದ ಪ್ರಮಾಣ ಹೆಚ್ಚಾಗಿ ಇದ್ದರೆ, ಅಥವಾ ಅಂಥ ವಸ್ತುಗಳು ಬಹಳ ಬೇಗನೆ ಲುಪ್ತವಾಗುತ್ತಿದ್ದರೆ, ಆಗ ಬಂಡವಾಳಕ್ಕೆ ಹೆಚ್ಚು ಬೇಡಿಕೆ ಇರುತ್ತದೆ. ಏಕೆಂದರೆ ಹಾಗೆ ಸವೆದ ಮತ್ತು ಲುಪ್ತವಾದ ಬಂಡವಾಳ ವಸ್ತುಗಳ ಬದಲಾಗಿ ಹೊಸ ಬಂಡವಾಳ ವಸ್ತುಗಳನ್ನು ಕೊಂಡು ತರಬೇಕಾಗುತ್ತದೆ.

(೩) ಗ್ರಾಹಕರ ಬೇಡಿಕೆ : ಬಂಡವಾಳಕ್ಕೆ ಬೇಡಿಕೆ ಏನಿದ್ದರೂ ಬೇರೆ ವಸ್ತುಗಳ ಬೇಡಿಕೆಯಿಂದ ಉತ್ಪತ್ತಿ ಆದುದು. ಗ್ರಾಹಕರ ವಸ್ತುಗಳಿಗೆ ಬೇಡಿಕೆ ಏರಿದರೆ, ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಗ್ರಾಹಕರ ವಸ್ತುಗಳನ್ನು ಉತ್ಪಾದಿಸುವುದಕ್ಕಾಗಿ, ಬಂಡವಾಳಕ್ಕೆ ಬೇಡಿಕೆ ಹೆಚ್ಚಾಗುತ್ತದೆ. ಗ್ರಾಹಕರ ವಸ್ತುಗಳಿಗೇ ಬೇಡಿಕೆ ಕಡಿಮೆ ಇದ್ದಲ್ಲಿ ಬಂಡವಾಳವನ್ನು ಯಾರೂ ಹೆಚ್ಚಿಗೆ ಬೇಡುವುದೇ ಇಲ್ಲ.

ಸರ್ಕಾರದ ಕಾರ್ಯನೀತಿ : ಪ್ರತಿಯೊಂದು ದೇಶದಲ್ಲೂ ಇತ್ತೀಚೆಗೆ ದೇಶದ

ಸರ್ಕಾರಗಳು ದೇಶದಲ್ಲಿ ನಡೆಯುವ ಎಲ್ಲ ಆರ್ಥಿಕ ಚಟುವಟಿಕೆಗಳ ಮೇಲೆ ಪರೋಕ್ಷವಾಗಿ ಇಲ್ಲವೇ ಪ್ರತ್ಯಕ್ಷವಾಗಿ ಹತೋಟಿ ಹಾಗೂ ನಿಯಂತ್ರಣವನ್ನು ಚಲಾಯಿಸುತ್ತವೆ. ಹಾಗೇ ಸರ್ಕಾರ ನಿರ್ಧರಿಸಿದರೆ, ಬೇಕಿದ್ದಲ್ಲಿ ಆರ್ಥಿಕ ಚಟುವಟಿಕೆಗಳಿಗೆ ಬಂಡವಾಳ ದೊರಕುವಂತೆಯೂ ಮಾಡಬಲ್ಲುದು ಇಲ್ಲವೇ ದೊರಕದಂತೆಯೂ ಮಾಡುವ ಸಾಮರ್ಥ್ಯವನ್ನು ಹೊಂದಿದೆ. ಅದೇ ರೀತಿಯಲ್ಲಿ

-೨೫೨-

ಸರ್ಕಾರಗಳು ಬಂಡವಾಳಕ್ಕೆ ಬೇಡಿಕೆಯನ್ನು ರೂಪಿಸಲೂಬಹುದು. ಏನಿದ್ದರೂ ಇದಕ್ಕಾಗಿ ಅಗತ್ಯವಾದ ಕಾರ್ಯನೀತಿಯನ್ನು ಜಾರಿಗೆ ತರಬೇಕು ಅಷ್ಟೆ. ನೇರವಾಗಿ ಸಾಲ ಒದಗಿಸಿ ಇಲ್ಲವೇ ಹಣಕಾಸಿನ ಸಂಸ್ಥೆಗಳ ಮೂಲ ಬಂಡವಾಳ ಒದಗಿಸಿ, ಸರ್ಕಾರ ಹಲವಾರು ಆರ್ಥಿಕ ಮತ್ತು ವ್ಯವಹಾರ ಚಟುವಟಿಕೆಗಳಿಗೆ ಉತ್ತೇಜನವನ್ನು ಕೊಡಲೂಬಲ್ಲದು.

೬. ಲಾಭ : ಭವಿಷ್ಯದ ಬಗ್ಗೆ, ಅದು ಬಹಳ ಅನಿಶ್ಚಯವಾದುದು ಎಂಬುದನ್ನು ಬಿಟ್ಟು ಬೇರೆ ಏನೂ ನಿಶ್ಚಯ ಇಲ್ಲ ಎಂದು ಹೇಳುವುದುಂಟು. ನೀವು ಯಾವುದೇ ವ್ಯವಹಾರಸ್ತನೊಡನೆ ಈ ಬಗ್ಗೆ ಹೇಳಿ ಅವನು ತಕ್ಷಣವೇ ಈ ಹೇಳಿಕೆಯನ್ನು ಒಪ್ಪಿಕೊಳ್ಳಲು ಸಿದ್ಧನಾಗಿರುತ್ತಾನೆ. ಏಕೆಂದರೆ ಅವನು ಹಲವಾರು ಸಲ ಭವಿಷ್ಯತ್ ಬಗ್ಗೆ ಇರುವ ಅನಿಶ್ಚಿತೆಯನ್ನು ಆಗಲೇ ಅನುಭವಿಸಿರುತ್ತಾನೆ. ವ್ಯವಹಾರಸ್ತ ಲಾಭದ ಅನಿಶ್ಚಯತೆಯ ಬಗ್ಗೆ ಹೆದರುವುದಿಲ್ಲ. ಅವನು

ಅನಿಶ್ಚಯ ಭವಿಷ್ಯದ ಬಗ್ಗೆ ಏಕೆ ಹೆದರುತ್ತಾನೆ ಎಂದರೆ, ಮುಂದೆ ಆಗಬಹುದಾದ ಹಲವಾರು ಬದಲಾವಣೆಗಳಿಂದ ವ್ಯವಹಾರದಲ್ಲಿ ಕಟ್ಟಕಡೆಗೆ ಎಷ್ಟು ಪ್ರಮಾಣದಲ್ಲಿ ನಷ್ಟವನ್ನು ಅನುಭವಿಸಬೇಕಾಗಬಹುದು ಎಂಬ ಬಗ್ಗೆ ಮಾತ್ರ.

ಈಗ ಹಲವಾರು ಅಪಾಯಗಳ ಬಗ್ಗೆ ವಿಮೆಯನ್ನು ಮಾಡಿಹಾಗೆ ಹಾನಿಗೊಳಗಾದ ಸಂದರ್ಭಗಳಲ್ಲಿ ಅಂಥ ಹಾನಿಯನ್ನು, ಹಣದ ರೂಪದಲ್ಲಿ

ಒಪ್ಪಂದ ಆದ ಪ್ರಮಾಣದಲ್ಲಿ ವಿಮಾ ಸಂಸ್ಥೆಗಳಿಂದ ಪಡೆದು ನಿವಾರಿಸಿಕೊಳ್ಳಲು ಸಾಧ್ಯವಿದೆ. ಆದರೆ ಸಂಘಟನಾಕಾರ ಎದುರಿಸುವ ನಷ್ಟಾಪಾಯದ ಜವಾಬ್ದಾರಿಯನ್ನು ಯಾವ ವಿಮಾ ಸಂಸ್ಥೆಯೂ ವಹಿಸಿಕೊಳ್ಳಲು ಒಪ್ಪುವುದಿಲ್ಲ. ಅಥವಾ ಇದುವರೆಗೂ ಒಪ್ಪಿಕೊಳ್ಳಲೂ ಮುಂದೆ ಬಂದಿಲ್ಲ. ಹೀಗೆ ಹಾನಿಯಹೊರೆಯನ್ನು ಹೊರುವುದಕ್ಕಾಗಿ ಸಂಘಟನಾಕಾರನಿಗೆ ಲಭ್ಯವಾಗುವ ಸಂಭಾವನೆಯೇ ಲಾಭ.

ಸಂಘಟನಾಕಾರ ಭೂಮಿ, ಶ್ರಮ ಮತ್ತು ಬಂಡವಾಳಗಳನ್ನು ತಂದು ಹಾಕಿ ಉತ್ಪಾದನಾ ಕಾರ್ಯವನ್ನು ವ್ಯವಸ್ಥೆಮಾಡುತ್ತಾನೆ. ಅವನು ಹೀಗೆ ತಂದ ಉತ್ಪಾದನಾ ಅಂಶಗಳ ಬಳಕೆಗಾಗಿ ಅವುಗಳ ಒಡೆಯರಿಗೆ, ಬಾಡಿಗೆ, ವೇತನ ಮತ್ತು ಬಡ್ಡಿಯನ್ನು ಪಾವತಿ ಮಾಡಬೇಕು. ಅವನು ಉತ್ಪಾದಿಸಿದ ವಸ್ತುಗಳನ್ನು ಮಾರಿ ಬಂದ ಒಟ್ಟುಮಾರಾಟ ಮೌಲ್ಯ, ಬಾಡಿಗೆ, ವೇತನ ಮತ್ತು ಬಡ್ಡಿಯ ರೂಪದಲ್ಲಿ ಖರ್ಚುಮಾಡಿದ್ದಕ್ಕಿಂತಲೂ ಹೆಚ್ಚಾಗಿದ್ದರೆ, ಆಗ ಅವನಿಗೆ



ಲಾಭ ಉಂಟಾಗುತ್ತದೆ. ಅಂಥ ಲಾಭ ಅವನು ಉತ್ಪಾದನೆ ಮಾಡುವ ಸಾಹಸಕ್ಕೆ ಇಳಿದು, ತೆಗೆದುಕೊಂಡ ಹಾನಿಯ ಜವಾಬ್ದಾರಿಗೆ ಪ್ರತಿ ಫಲವಾಗಿಸಿಕ್ಕುವ ಸಂಭಾವನೆ.

ಇಲ್ಲಿ ನೀವು ಗಮನದಲ್ಲಿ ಇಡಬೇಕಾದ ಅಂಶವೇನೆಂದರೆ ನಾವು ಅಪಾಯ ಅಥವಾ ಹಾನಿಯ ಹೊರೆಯ ಬಗ್ಗೆ ಹೇಳುತ್ತಿರುವುದು. ಸಂಘಟನಾಕಾರ ಎದುರಿಸಬೇಕಾದ ನಷ್ಟಾಪಾಯವನ್ನು. ಉತ್ಪಾದನಾ ಅಂಶಗಳ ಒಡೆಯರು ತಮ್ಮ ಅಂಶಗಳನ್ನು ಸಂಘಟನಾಕಾರನಿಗೆ ಬಳಕೆಗೆ ಕೊಟ್ಟು ಎದುರಿಸಬೇಕಾದ ನಷ್ಟಾಪಾಯದ ಬಗ್ಗೆ ನಾವು ಇಲ್ಲಿ ಈಗ ಏನನ್ನೂ ಹೇಳುತ್ತಿಲ್ಲ. ಏನು ಹೇಳಿದರೂ ಸಂಘಟನಾಕಾರನಿಗೆ ಸಂಬಂಧ ಪಟ್ಟಂತೆ, ಅಷ್ಟೆ.

ಸಂಘಟನಾಕಾರ ಒಪ್ಪಿಕೊಂಡಿರುವುದೇನೆಂದರೆ, ಉತ್ಪಾದನಾ ಅಂಶಗಳ ಒಡೆಯರಿಗೆ ಕೊಡಬೇಕಾದ ಅಂಶ ಬೆಲೆಗಳು, ಹೀಗೆ ಪಾವತಿ ಮಾಡಲಾದ

ಅಂಶ ಬೆಲೆಗಳಿಗಿಂತಲೂ ಹೆಚ್ಚಾದ ಬೆಲೆಗೆ ತಾನು ಉತ್ಪಾದಿಸಿದ ವಸ್ತುಗಳನ್ನು ಮಾರಾಟಮಾಡಿದರೆ, ಅವನ ಪ್ರತಿಫಲ, ಲಾಭ ಸಿಕ್ಕುತ್ತದೆ. ಅವನು ಉತ್ಪಾದನಾ ಕಾರ್ಯಕ್ಕೆ ತನ್ನ ಸ್ವಂತ ಉತ್ಪಾದನಾ ಅಂಶಗಳನ್ನು (ಉದಾಹರಣೆಗೆ ಭೂಮಿ, ಬಂಡವಾಳ) ಹಾಕಿದ್ದರೆ, ಅವನ ಲಾಭವನ್ನು ಲೆಕ್ಕ ಹಾಕುವಾಗ ಅವನ ಉತ್ಪಾದನಾ ಅಂಶಗಳಿಗೆ ಕೊಡಬೇಕಾದ ಅಂಶ ಬೆಲೆಯನ್ನು ಬೇರ್ಪಡಿಸಬೇಕು. ಹಾಗೆ ಒಟ್ಟುಲಾಭದಿಂದ ಅಂಶದ ಬೆಲೆಯನ್ನು ಬೇರ್ಪಡಿಸಿದಾಗ ಉಳಿಯುವ ಲಾಭವೇ ಸಂಘಟನಾಕಾರನ ಪ್ರತಿಫಲ ಅಥವಾ ಸಂಭಾವನೆ ಅಥವಾ ಸಂಘಟನೆಯ ಅಂಶ ಬೆಲೆ.

ಉತ್ಪಾದನಾ ಅಂಶಗಳ ಒಡೆಯರಿಗೆ ಅಂಶದ ಬೆಲೆಗಳನ್ನು ಪಾವತಿ ಮಾಡಿ ಆದ ಮೇಲೆ, ಉಳಿಯುವ ಲಾಭದಲ್ಲಿ ಮೂರು ಭಾಗಾಂಶಗಳಿವೆ: (ಅ) ಸಂಘಟನಾಕಾರ ತಂದ ಬಂಡವಾಳದ ಮೇಲೆ ಬಡ್ಡಿ. ಸಂಘಟನಾಕಾರ ಹಾಗೂ ವ್ಯವಹಾರ ಉದ್ದಿಮೆಯ ಒಡೆಯ ಎರಡೂ ಒಬ್ಬನೇ ಆಗಿದ್ದರೆ, ಸಂಘಟನಾಕಾರ ಅಥವಾ ಉದ್ದಿಮೆಯ ಒಡೆಯ ಒಂದು ಪ್ರಮಾಣದಲ್ಲಿ ಬಂಡವಾಳ ಹಾಕೇ ಇರುತ್ತಾನೆ. ಹಾಗೆ ತಂದ ಬಂಡವಾಳಕ್ಕೆ ಬಡ್ಡಿಯನ್ನು ಹಾಕಬೇಕು. (ಆ) ಸಂಘಟನಾಕಾರನ ವೇತನ, ಸಂಘಟನಾಕಾರ, ಸಂಘಟನಾಕಾರನಾಗಿ ದುಡಿದ ಶ್ರಮಕ್ಕೆ ವೇತನವನ್ನು ಕೊಡಬೇಕಾಗಿದೆ. ಮತ್ತು (ಇ)



ಶುದ್ಧ ಲಾಭ. ಈ ಶುದ್ಧ ಲಾಭ ಸಂಘಟನೆಗೆ ಕೊಡುವ ಪ್ರತಿಫಲ ಅಥವಾ ಪರಿಹಾರ ಅಥವಾ ಸಂಭಾವನೆ ಅಥವಾ ಅಂಶ ಬೆಲೆ. ಒಂದು ದೃಷ್ಟಾಂತ ನಿಮಗೆ ಇನ್ನೂ ಈ ಬಗ್ಗೆ ಇರಬಹುದಾದ ಅನುಮಾನಗಳನ್ನು ಪರಿಹರಿಸುತ್ತದೆ.

ಶುದ್ಧಲಾಭ ಅಥವಾ ಆರ್ಥಿಕ ಲಾಭವೇ ಸಂಘಟನಾಕಾರನ ಸಂಭಾವನೆ, ಯಾರೇ ಆದರೂ ತಾವೇ ಸ್ವಂತವಾಗಿ ತಮ್ಮ ವ್ಯವಹಾರವನ್ನು ವ್ಯವಸ್ಥೆ

ಮಾಡಿ ನೋಡಿಕೊಂಡರೆ ಆಗಲೂ ಮೇಲಿನ ಲೆಕ್ಕಾಚಾರವನ್ನೇ ಅನುಸರಿಸಬಹುದು. ಉದಾಹರಣೆಗೆ, ಏಕ ವ್ಯಾಪಾರಿ, ಹೀಗೆ ಲಾಭದಲ್ಲಿ ಒಂದು ಭಾಗ ಅವರಿಗೆ ಸಲ್ಲದೇ ಇದ್ದಲ್ಲಿ ಕೂಡು ಬಂಡವಾಳ ಸಂಸ್ಥೆಗಳ ವ್ಯವಸ್ಥಾಪಕ ಇಲ್ಲವೇ ವ್ಯವಸ್ಥಾಪಕ ನಿರ್ದೇಶಕನೇ ಆಗಲಿ. ಅವರಿಬ್ಬರನ್ನೂ ಇಲ್ಲಿನ ಅರ್ಥದಲ್ಲಿ



ಸಂಘಟನಾಕಾರ ಎಂದು ಪರಿಗಣಿಸಲಾಗುವುದಿಲ್ಲ. ಏಕೆಂದರೆ, ಇದರ ಬಗ್ಗೆ ನಿಜ ಪರೀಕ್ಷೆ ಏನೆಂದರೆ ನಿಮಗೆ ಈಗಾಗಲೇ ತಿಳಿದಿರುವಂತೆ ಲಾಭದಲ್ಲಿ ಪಾಲು ಪಡೆಯುವವನೇ ಸಂಘಟನಾಕಾರ. ಏಕ ವ್ಯಾಪಾರದಲ್ಲಿ ವ್ಯಾಪಾರದ ಒಡೆಯನೊಬ್ಬನಿಗೇ ಅವನ ವ್ಯವಹಾರದ ಲಾಭ ಎಲ್ಲವೂ ಸೇರುತ್ತದೆ ಆದ್ದರಿಂದ ಅವನೂ ಒಬ್ಬ ಸಂಘಟನಾಕಾರನೇ ಆಗಿರುತ್ತಾನೆ.

ಯಾವುದೇ ಒಂದು ವ್ಯವಹಾರದಲ್ಲಿ ಬಂಡವಾಳ ಮತ್ತು ಸಂಘಟನೆ ಇರಬೇಕಾದರೆ ಆ ವ್ಯವಹಾರದಲ್ಲಿ ಒಂದು ನಿರ್ದಿಷ್ಟ ಮಟ್ಟದಲ್ಲಾದರೂ ಲಾಭ ಬರುತ್ತಿರಬೇಕು. ಇಂಥ ಲಾಭವನ್ನು "ಸಾಧಾರಣ ಲಾಭ" ಎನ್ನಲಾಗುತ್ತದೆ. ಲಾಭದ ಮಟ್ಟ ಕೈಗಾರಿಕೆಯಿಂದ ಕೈಗಾರಿಕೆಗೆ, ಹಾಗೆ ವ್ಯವಹಾರದಿಂದ ವ್ಯವಹಾರಕ್ಕೆ, ಉದ್ದಿಮೆಯಿಂದ ಉದ್ದಿಮೆಗೆ ಬೇರೆ ಬೇರೆಯೇ ಇರುತ್ತದೆ. ಏಕೆಂದರೆ ಒಂದೊಂದು ಕೈಗಾರಿಕೆ, ವ್ಯವಹಾರ ಅಥವಾ ಉದ್ದಿಮೆಯಲ್ಲೂ ಇರುವ ಅನಿಶ್ಚಯತೆ ಹಾಗೂ ಹಾನಿಯ ಹೊರೆ ಬೇರೆ ಬೇರೆಯೇ ಇರುತ್ತದೆ.

ಪ್ರಾಸಂಗಿಕ ಪ್ರಶ್ನೆಗಳು

೧. ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಖಾಲಿ ಇರುವ ಸ್ಥಳಗಳನ್ನು ಭರ್ತಿಮಾಡಿ:

(ಅ) ಸಂಘಟನೆಗೆ.............ದೊರೆಯುತ್ತದೆ.

(ಆ) ವೇತನವನ್ನು.............ಕೊಡಲಾಗುತ್ತದೆ.

(ಇ) ..............ಗೆ ಬಾಡಿಗೆಯನ್ನು ಕೊಡಲಾಗುತ್ತದೆ.

(ಈ) ಬಡ್ಡಿಯನ್ನು .............ಕ್ಕೆ ಕೊಡಲಾಗುತ್ತದೆ.

೨. ಕನಿಷ್ಟವೇತನ ಮತ್ತು ನ್ಯಾಯವೇತನಗಳನ್ನು ತಾರತಮ್ಯ ಮಾಡಿ.

೩. ಅರ್ಥಶಾಸ್ತ್ರದಲ್ಲಿ ಬಾಡಿಗೆ ಎಂದರೆ ಏನು ಎಂದು ನೀವು ತಿಳಿದ್ದಿದ್ದರೋ ಅದನ್ನು ಬಳಸಿ ಒಂದು ಪ್ರಬಂಧವನ್ನು ರಚಿಸಿ.

೪. ಕೆಳಕಂಡ ವಿಷಯಗಳನ್ನು ಕ್ಲುಪ್ತವಾಗಿ ವಿವರಿಸಿ:

(ಅ) ಮುಷ್ಕರ. (ಆ) ಅಂಶಗಳ ಬೆಲೆ

(ಇ) ಕನಿಷ್ಠ ವೇತನ (ಈ) ಕಾರ್ಮಿಕರ ಸಂಘಗಳು.



೫. ಕಾರ್ಮಿಕ ಸಂಘಗಳು ಹೂಡುವ ಮುಷ್ಕರಗಳ ಬಗ್ಗೆ ನೀವು ಏನನ್ನು ತಿಳಿದಿದ್ದಿರೋ ಅದನ್ನು ಸರಳ ಭಾಷೆಯಲ್ಲಿ ಬರೆಯಿರಿ.

೬. ಶ್ರಮಕ್ಕೆ ಪ್ರತಿಫಲವಾಗಿ ವೇತನವನ್ನು ಕೊಡಲಾಗುತ್ತದೆ. ವಿವರಿಸಿ.

೭. ಬಡ್ಡಿಯ ದರದ ನಿರ್ಣಾಯಕ ಅಂಶಗಳು ಯಾವುವು? ವಿವರಿಸಿ.

೮. ಬಂಡವಾಳದ ಪೂರೈಕೆ ಹಾಗೂ ಬೇಡಿಕೆಯನ್ನು ಯಾವ ಅಂಶಗಳು ನಿರ್ಣಯಿಸುತ್ತವೆ ಎಂಬುದನ್ನು ವಿವರಿಸಿ.

೯. ಎಲ್ಲ ಉತ್ಪಾದನಾ ಅಂಶಗಳ ಒಡೆಯರಿಗೆ, ಅಂಶಗಳ ಬಳಕೆಗೆ ಪ್ರತಿಫಲವಾಗಿ ಅಂಶ ಬೆಲೆಯನ್ನು ಕೊಟ್ಟನಂತರ ಉಳಿಯುವ ಹೆಚ್ಚುವರಿಯೇ ಲಾಭ. ಇದಕ್ಕೆ ವಿವರಣೆ ಕೊಡಿ.

೧೦. ಇವುಗಳನ್ನು ಉದಾಹರಣೆಗಳೊಂದಿಗೆ ವಿವರಣೆ ಕೊಡಿ:

(ಅ) ಅಂಚಿನ ಭೂಮಿ. (ಆ) ಅಂಚಿನ ಮೇಲೆ ಇರುವ ಭೂಮಿ

(ಇ) ಅಂಚಿನ ಕೆಳಗಿರುವ ಭೂಮಿ.

(ಈ) ಆರ್ಥಿಕ ಬಾಡಿಗೆಯ ಉಪಯುಕ್ತತೆ.

೧೧. ಯಾವುದೇ ಒಂದು ಉತ್ಪಾದನಾ ಅಂಶದ ಪೂರೈಕೆ ಸ್ಥಿರವಾಗಿದ್ದರೆ, ಅಂಥ ಎಲ್ಲ ಅಂಶಗಳಿಗೂ ಬಾಡಿಗೆ ಸಿದ್ಧಾಂತವನ್ನು ಅನ್ವಯಿಸಬಹುದು. ಈ ಹೇಳಿಕೆಯನ್ನು ವಿವರಿಸಿ.

೧೨. ರಾಜ್ಯಸರ್ಕಾರ ನಿಮ್ಮನ್ನು ವೇತನ ಮಂಡಳಿಗೆ ಸದಸ್ಯನನ್ನಾಗಿ ಆರಿಸಿದೆ. ಮಂಡಳಿಯ ಮುಂದೆ ಇರುವ ಸಮಸ್ಯೆ, ಕನಿಷ್ಠ ವೇತನವನ್ನು ಶ್ರಮಕ್ಕೆ ನಿಗದಿ ಮಾಡುವುದೋ ಅಥವಾ ನ್ಯಾಯವೇತನವನ್ನು ನಿಗದಿ ಮಾಡುವುದೋ ಎಂಬ ಬಗ್ಗೆ ಜಿಜ್ಞಾಸೆ. ಈ ಬಗ್ಗೆ ನೀವು ಯಾವುದನ್ನು ಬೆಂಬಲಿಸುತ್ತೀರಿ ಎಂಬುದನ್ನು ಸಾಕಷ್ಟು ವಿವರಣೆ ಕೊಟ್ಟು ತಿಳಿಸಿ.

೧೩. ಶ್ರಮಕ್ಕಾಗಿ ಹೆಂಗಸರಿಗೆ ಕೊಡುವ ವೇತನ ಮಟ್ಟದಲ್ಲಿ ಪಕ್ಷಪಾತ ಇದೆ. ಈ ಹೇಳಿಕೆಯನ್ನು ವಿಮರ್ಶೆ ಮಾಡಿ.

೧೪. ಕೆಳಕಂಡ ವಾಕ್ಯಗಳು ಸರಿ ಇದೆಯೋ, ತಪ್ಪು ಇದೆಯೋ ತಿಳಿದು ತಪ್ಪಿದ್ದ ವಾಕ್ಯಗಳನ್ನು ಅಗತ್ಯವಾದಂತೆ ತಿದ್ದಿರಿ:

(ಅ) ಉತ್ಪಾದನಾ ಅಂಶವಾದ ಸಂಘಟನೆಗೆ ಪ್ರತಿಫಲವಾಗಿ ಬಾಡಿಗೆ



ದೊರೆಯುತ್ತದೆ.

(ಆ) ಭಾರತ ದೇಶದಲ್ಲಿ ಕೆಲಸಗಾರರಿಗೆ ಸಂಭಾವನೆ ಕೊಡುವಾಗ ಲಿಂಗ ಭೇದ ಮಾಡಿ ಪಕ್ಷಪಾತ ಮಾಡಕೂಡದು ಎಂದು ದೇಶದ ಸಂವಿಧಾನದಲ್ಲೇ ಒಂದು ರಕ್ಷಣೆಯನ್ನು ಒದಗಿಸಲಾಗಿದೆ.

(ಇ) ಉದ್ಯೋಗದಾತನ ಎದುರಿನಲ್ಲಿ ಪ್ರತಿಯೊಬ್ಬ ಕಾರ್ಮಿಕನೂ ಅಬಲನೇ ಸರಿ.

(ಈ) ಬೀಗಮುದ್ರೆ, ಉದ್ಯೋಗಿಗಳು ಉದ್ಯೋಗದಾತನ ವಿರುದ್ಧ ಮಾಡುವ ಒಂದು ಕ್ರಮ.

(ಉ) ಕಛೇರಿ ನೌಕರರು ಲೇಖಣಿ ಕೆಳಗಿಟ್ಟ ಮುಷ್ಕರವನ್ನು

ಮಾಡುತ್ತಾರೆ.

(ಊ) ಹಣದ ಪೇಟೆಯಲ್ಲಿ ಕಾರ್ಯವಹಿಸುತ್ತಿರುವ ಪೂರೈಕೆ ಮತ್ತು ಬೇಡಿಕೆಗಳೂ ಜತೆಗೆ ಸರ್ಕಾರದ ಹಣಕಾಸಿನ ನೀತಿ ಬಡ್ಡಿದರವನ್ನು ನಿರ್ಧರಿಸುತ್ತವೆ.

ಪಾರಿಭಾಷಿಕ ಪದ ಅರ್ಥ ಸೂಚಿ

ಅಂಚಿನ ಭೂಮಿ

ಅಂಚಿನ ಮೇಲೆ ಇರುವ ಭೂಮಿ

ಅಂಚಿನ ಕೆಳಗೆ ಇರುವ ಭೂಮಿ

ಅಂಶ ಬೆಲೆ ಅಂಶಗಳ ಒಡೆಯರು

ಅನಿಶ್ಚಯತೆ

ಆರ್ಥಿಕ ಬಾಡಿಗೆ ಆದರ್ಶ ವೇತನ

ಆರ್ಥಿಕ ಲಾಭ

ಆಯುಧ ಕೆಳಗಿಟ್ಟ ಮುಷ್ಕರ

ಆಶಾವಾದಿ ಮನೋಭಾವ

ಉದ್ಯೋಗಿ ಉದ್ಯೋಗದಾತ

-೨೫೮-

ಏಕವ್ಯಾಪಾರಿ

ಒಪ್ಪಂದದ ಕನಿಷ್ಠ ವೇತನ

ಒಪ್ಪಂದದ ಬಡ್ಡಿ

ಒಪ್ಪಂದದ ಬಾಡಿಗೆ

ಒಳಗಿದ್ದೇ ಮುಷ್ಕರ

ಕನಿಷ್ಠ ವೇತನ

ಕಾನೂನು ಬದ್ಧ ಕನಿಷ್ಠ ವೇತನ

ಕಾಯಿದೆ ಬದ್ಧ ಕನಿಷ್ಟ ವೇತನ

ಕಾರ್ಮಿಕರ ಸಂಘಗಳು

ಕಾಲದ ಅಂಶ

ಕೈಗಾರಿಕಾ ಮುಷ್ಕರಗಳು

ಕೊಡುವ ಸಾಮರ್ಥ್ಯ

ಚಳವಳಿ ಕ್ರಮ

ಚೌಕಾಶಿ ಮಾಡುವ ಶಕ್ತಿ

ಜೀವನ ವೆಚ್ಚ ತರಗು

ತುಟ್ಟಿ ಹಣದ ಕಾರ್ಯನೀತಿ

ನಿಯಮಕ್ಕನುಸಾರವಾದ ಕೆಲಸ

ನಿರಾಶಾವಾದಿ ಮನೋಭಾವ

ನಿಜವೇತನ ನ್ಯಾಯವಾದ ವೇತನ

ಪೂರ್ಣ ಮುಷ್ಕರ

ಪದಾರ್ಥದ ವೆಚ್ಚ ರಚನೆ

ಬಡ್ಡಿ ಬಡ್ಡಿ ಎನ್ನಬಹುದಾದ ಬಡ್ಡಿ

ಬೀಗ ಮುದ್ರೆ ಬಾಡಿಗೆ

ಮುಷ್ಕರ

ರಾಷ್ಟ್ರೀಯ ಕನಿಷ್ಟ ವೇತನ

ಲಾಭ ಲೇಖಣಿಕೆಳಗಿಟ್ಟ ಮುಷ್ಕರ

ವೇತನ ವೇತನ ಮಟ್ಟ

ವ್ಯವಹಾರ ನಿರೀಕ್ಷೆಗಳು

ಶುದ್ಧಬಡ್ಡಿ ಶುದ್ಧಲಾಭ

ಸಂಭಾವನೆ ಸಾಧಾರಣ ಲಾಭ

ಸಾಲದ ಅಗ್ಗ
ಹಣದ ವೇತನ